ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩-೮-೦

ತಾ. ೨೩—೧೨—೧೯೩೮. ಸಂಪುಟ ೧೮] [ಸಂಚಿಕೆ ೨೯

The Bombay Life Assurance Company Ltd.

(Estd. 1908.)

45-47, Churchgate Street, Fort-Bombay.

Progress Proves Its Popularity.

Year.	Business in force.	Claims Paid.	Life Assurance Fund.
1931	2,26,82,430	2.91,880	33,24,809
1933	3,07,98,435	3.54,003	50.04,871
1935	4,42,51,214	5,75,198	68,01,501
1937	6,04,70,594	6,00,918	98,68,232

Total Claims Paid Between 1909 and 1937—Rs. 50,22,576.

BOMBAY LIFE is a purely India Concern Offering all that is best in Life Assurance.

To Insure or to Represent it pays you to consult us or our Branches—

KOCHIKAR & BROTHERS Ltd.,
Madras Branch Secretaries,
Post Box No. 337, Mount Road, MADRAS. [Phone No. 8248.]

18

Bombay Life Building Udipi	Gautam Nivas Charni Road Girgaum Bombay 4	Visweswarapuram. Circle Bangalore City	Puthiyara Calicut	Car Street, Mangalore	Ottapalam S. Malabar.	Central Station Road. Trivandrum

THE CANARA BANKING CORPORATION, UDIPI, Ltd.

(Incorporated in British India.)
Estd. 1906.

MEMBER: { RESERVE BANK OF INDIA, & BANKERS' CLEARING HOUSE, MADRAS.

Head Office: UDIPI, S. K.

Branches.

1. Udipi, 2. Coondapoor, 3. Car Street, Mangalore, 4. Madras, 5. Shimoga, 6. Bunder, Mangalore, 7. Mercara, 8. Virarajendrapet, 9. Saklaspur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam, 18. Malpe, 19. Erode, 20. Thirthahalli.

Advances on GOLD & OTHER VALUABLE SECURITIES are granted at all our Branches.

DEPOSITS for varying periods are accepted at the following rates :—

3 months	2½% p. a.
6 & 9 months	3 % p. a
12 & 24 months	3½% p. a.
SHORT TERM	2 % p a.
SAVINGS BANK ACCOUNT	2½% p. a.

BANKING BUSINESS OF EVERY DESCRIPTION UNDERTAKEN.

52-2

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂ ಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವ ಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural & Industrial Bank Ltd

52–29

ಝಂಡೂರವರ

ದ್ರಾಕ್ಷಾಸವ

ಮತ್ತು

ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸ ಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮ ವಾದದ್ದು. ಕ್ಷಯದ ಪ್ರಾರಂಭಾವಸ್ಥೆ ಯಲ್ಲಿ ದಿವ್ಯವಾದ ಔಷಧ.

"ZANDU"
ಝಂಡೂರವರ

ಕೇಸರಿ ಚೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯ ವಾದ ಔಷಧ.

ಝಂಡೂ ಅಯೋಡೈಸ್ಡ್

ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ್ಕು ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್, ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–19)

ವೀರರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್., ಅಜ್ಮೀರ್.

ಭಾರತದ ಬಹುಮಂದುವರಿದ ಜೀವವಿಮಾ ಕಂಪೆನಿಯಲ್ಲಿ ವಿಮೆಮಾಡಿ ನಿಮ್ಮ ಮನಸ್ಸಮಾಧಾನ ಪಡಿಸಿಕೊಳ್ಳಿ

೩೧-೧೨-೧೯೩೭ನೇ ತಾರೀಖಿನ ದಿನ ಇದ್ದ ಕಂಪೆನಿಯ ಆಸ್ತಿಗಳು.

ಪಾಲಿಸಿಗಳ ಮೇಲೆ ಸಾಲಗಳು	೬,೦೧,೭೩೮— ೭—೦
ಏಜಂಟರಿಗೆ ಸಾಲ ಮತ್ತು ಅಸ್ತಿಯ ಒತ್ತೆ	೩೦,೨೩೮— ೦—೦
ಕರೆನ್ಸಿ ಕಂಟ್ರೋಲರ ಬಳಿ ಡಿಪಾಜಿಟ್ಟು	೨,೦೦,೦೦೦— ೦—೦
ಸರಕಾರದ ಸೆಕ್ಯೂರಿಟಿಗಳು ಮತ್ತು ಮುನಿಸಿಪಲ್ ಡಿಬೆಂಚರುಗಳು	೬೦,೨೯,೨೪೫— ೦—೦
ಭವನದ ಆಸ್ತಿಗಳು	೧೦,೬೭,೧೫೬— ೨—೦
ಬ್ಯಾಂಕಿನಲ್ಲಿ ಮತ್ತು ಕೈಯಲ್ಲಿರುವ ಹಣ	೯೩,೦೮೮— ೩—೮
ಇತರ ಆಸ್ತಿಪಾಸ್ತಿಗಳು	೩,೬೧,೫೦೭— ೪—೩

ಸೊಸೈಟಿಯ ಅಭಿವೃದ್ಧಿಯು ಅದು ಕೂಡಿಸಿರುವ ಹಣದಿಂದ ಗೊತ್ತಾಗುವುದು.

೧೯೧೭ ———— ೩,೨೫,೧೩೩ ರೂಗಳು.
೧೯೨೭ ———— ೨೧,೩೫,೨೩೪ ರೂಗಳು.
೧೯೩೭ ———— ೮೫,೩೨,೯೭೩ ರೂಗಳು.

ಜಾರಿಯಲ್ಲಿರುವ ವ್ಯಾಪಾರ .... ೩,೨೫,೯೭,೦೪೦ ರೂಗಳಿಗೆ ಮೇಲೆ
ಪಾವತಿ ಮಾಡಿದ ಕ್ಲೈಮ್ ಹಣ .... ೪೮,೦೦,೦೦೦ ರೂಗಳಿಗೆ ಮೇಲೆ

ಸೊಸೈಟಿಯು ವಿಶಾಲವಾದ ಪಾಲಿಸಿಗಳನ್ನು ವಿಚಾರಿಸುವುದರಿಂದ ಲಾಭವುಂಟು.

ದಯವಿಟ್ಟು ಕೆಳಗೆ ಕಂಡವರಿಗೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಥವಾ

ಬ್ರಹ್ಮದತ್ತ, ಬಿ.ಎಸ್ಸಿ., ಎಲ್ಎಲ್.ಬಿ.
ಆಫಿಷಿಯೇಟಿಂಗ್ ಜನರಲ್ ಮ್ಯಾನೇಜರ್,
ಅಜ್ಮೀರ್.

12–13

ವಿವಿಧ ವಿಚಾರ.

ನಗೆಗೆ ಕಾರಣವೇನು?

ನಗೆಯ ಕಾರಣವನ್ನು ಕಂಡು ಹಿಡಿಯಲು ಅನೇಕ ವೈಜ್ಞಾನಿಕರು ಪ್ರಯೋಗಗಳನ್ನು ನಡೆಸಿದರು. ಒಂದು ಕಾಡು ಬೆಕ್ಕಿಗೆ ಆಹಾರವನ್ನು ತೋರಿಸಿದಾಗ, ಅದು ಒಂದು ಬಗೆಯ ಶಬ್ದವನ್ನು ಮಾಡುತ್ತದೆ. ಅದಕ್ಕೂ ನಾವು ನಗುವುದಕ್ಕೂ ಸಂಬಂಧವಿದೆಯೆಂದು ಹೇಳಿದರೆ ಆಶ್ಚರ್ಯವಾಗುವುದಿಲ್ಲವೇ?

ಪ್ರಾಣಿಗಳಿಗಾಗಲಿ, ಮನುಷ್ಯನಿಗಾಗಲಿ ನಗೆ ಬರಲು ಒಂದೇ ಕಾರಣ. ಒಂದು ಬಯಕೆಯು ಪೂರ್ಣವಾದಾಗ ಉಂಟಾಗುವ ಮನೋವಿಕಾರವೇ ನಗೆಗೆ ಕಾರಣವು. ಬಯಕೆ ತೀರಿದ ಮರುಕ್ಷಣವೇ ಕಾಡು ಬೆಕ್ಕು ಹರ್ಷ ಧ್ವನಿಯನ್ನು ನಿಲ್ಲಿಸುವುದು.; ನಾಯಿಯು ಬಾಲ ಅಲ್ಲಾಡಿಸುವುದನ್ನು ನಿಲ್ಲಿಸುದು.

ನಮ್ಮ ಪೂರ್ವಜರಾದ ಪ್ರಾಣಿಗಳು ಒಂದರೊಡನೊಂದು ಸ್ನೇಹದಿಂದ ಕಚ್ಚಾಡಿ ಸುಖವನ್ನನುಭವಿಸುತ್ತವೆ. ಅದರಂತೆಯೇ ನಾವು ಒಂದು ವಿನೋದವಾದ ಸಂಗತಿಯನ್ನು ಮತ್ತೊಬ್ಬರಿಗೆ ಹೇಳಿ ಸುಖವನ್ನನುಭವಿಸುವೆವು.

ಕಚ್ಚಾಡುವ ಬದಲು ನಾವು ನಮ್ಮ ಸ್ನೇಹಿತರ ಕೈಯ್ಯನ್ನು ಎಳೆಯುತ್ತೇವೆ. ಸಂತೋಷ ಉಕ್ಕಿದಾಗ ಹಲ್ಲನ್ನು ಹೊರಗೆ ತೋರಿಸುವ ಅಭ್ಯಾಸ ಪ್ರಾಣಿಗಳಿಗೂ ನಮಗೂ ಸಮಾನವಾಗಿ ಉಳಿದಿದೆ.

ನಗೆಯು ಸಂಘಕ್ಕೆ ಸಂಬಂಧಿಸಿದ್ದಾಗಿದೆ. ನಾವು ನಗೆಯನ್ನು ಮತ್ತೊಬ್ಬರಿಗೆ ತೋರ್ಪಡಿಸಿಕೊಳ್ಳುತ್ತೇವೆ. ಆದುದರಿಂದಲೇ ಒಬ್ಬೊಂಟಿಗರಾಗಿರುವಾಗ ನಾವು ಮನದಣಿಯುವಂತೆ ನಗುವುದಿಲ್ಲ. ಸಾಂಘಿಕ ಪ್ರಾಣಿಗಳಲ್ಲಿ ನಗೆ ಹೆಚ್ಚಾಗಿ ಕಂಡು ಬರುವುದು. ಅದನ್ನು ನಾಯಿ, ನರಿಗಳಲ್ಲಿಯೂ, ಕೋತಿಗಳಲ್ಲಿಯೂ ಕಾಣಬಹುದು.

—೦೦—

ನೆಗಾಡುವುದರಿಂದ ಆರೋಗ್ಯಲಾಭವಾಗುವುದು.

ನೆಗಾಡವುದರಿಂದ ಆರೋಗ್ಯವು ವೃದ್ಧಿಸುವುದು. ಒಬ್ಬನು ಸಂತೋಷದಿಂದ ನೆಗಾಡುವಾಗ ಅವರಿಂದ ಜನ್ಯವಾಗುವ ಶರಂಗದಿಂದ ಮಾನವ ಶರೀರದ ಅತ್ಯಂತ ಮೂಲೆ ಮೂಲೆಗಳಲ್ಲಿರುವ ರಕ್ತನಾಳಗಳಲ್ಲಿಯೂ ಪರಿಣಾಮವನ್ನು ತೋರಿಸುವುದು. ಈ ಅಭಿಪ್ರಾಯವನ್ನು ಡಾ. ಗ್ರೀನಿಯವರು ಕೊಟ್ಟಿದ್ದಾರೆ. ಹೀಗೆ ಈ ಅಲೆಗಳು ದೇಹದ ಪ್ರತಿಯೊಂದು ಭಾಗಕ್ಕೂ ಹೋಗುವುದು. ಆ ಅಲೆಗಳು ಸಂಚರಿಸುವ ಭಾಗಗಳಲ್ಲಿ ನವಚೇತನವು ಕಾಣಿಸಿಕೊಳ್ಳುವುದು. ರಕ್ತವು ಚುರುಕಾಗಿ ಚಲಿಸುವುದು. ಇದರಿಂದ ಇಡೀ ದೇಹದಲ್ಲಿ ನವಶಕ್ತಿ, ನವ ಹುರುಪು ಉಂಟಾಗುವುದು. ಆದಕಾರಣದಿಂದ ಪ್ರತಿಯೊಂದು ಸಂತೋಷದ ನಗೆಯೂ ಆರೋಗ್ಯ ಅಭಿವೃದ್ಧಿಗೆ ಮುಖ್ಯವಾದ ಒಂದು ಸಾಧನವೆಂದು ತಿಳಿಯಬೇಕು.

ಬೇರೆ ಬೇರೆ ಜನರು ಬೇರೆ ಬೇರೆ ವಿಧದ ಶಬ್ದವನ್ನು (ನಗುವಾಗ) ಮಾಡುತ್ತಾರೆ. ಈ ಶಬ್ದಗಳನ್ನು ಮಾಡುವ ಜನರನ್ನು ಪರೀಕ್ಷಿಸಿ ಕೆಲವು ವಿಶೇಷ ಸಂಗತಿಗಳನ್ನು ಕಂಡು ಹಿಡಿದಿದ್ದಾರೆ. ನೆಗಾಡುವಾಗ ಜನರು ಮಾಡುವ ಶಬ್ದದಿಂದ ಅವರ ಸ್ವಭಾವವನ್ನು ತಿಳಿಯಬಹುದೆಂದು ಪಂಡಿತರು ಹೇಳುತ್ತಾರೆ. 'ಅ' ಕಾರದಲ್ಲಿ ನೆಗಾಡುವವರು (ಉದಾ: ಅಹಹ-ಆಹ!'ಹ!) ನಿರ್ವಂಚಕರು, ಇದ್ದುದನ್ನು ಇದ್ದಂತೆ ಹೇಳುವರು, ಇತ್ಯಾದಿ ಗುಣವನ್ನು ಹೊಂದಿರುವರು. 'ಎ' ಶಬ್ದವನ್ನು (ಉದಾ: ಹೆ! ಹೆ! ಹೆ!) ಮಾಡುವವರು ಸದಾ ವ್ಯಸನಕ್ರಾಂತರು. 'ಇ' ಶಬ್ದವನ್ನು ಮಾಡುವವರು (ಹೆಚ್ಚಾಗಿ ಮಕ್ಕಳು) ಪರೋಪಕಾರಿಗಳು, ನಿರ್ವಂಚಕರು, ಪ್ರೀತಿಯುಳ್ಳವರು, ಭೀರುಗಳು. 'ಹೋ' ಶಬ್ದ ಮಾಡುವವರು ಧಾರಾಳ ಮನಸಿನವರು ಧೈರ್ಯಶಾಲಿಗಳು. 'ಉ' ಶಬ್ದ ಮಾಡಿ ನೆಗಾಡುವವರನ್ನು ಹತ್ತಿರ ಸೇರಿಸಬಾರದು. ಇವರಲ್ಲಿ ಯಾವ ರೀತಿಯ ತತ್ವವೂ ಇಲ್ಲ.

—೦೦—

ಪೂಟಗಾರನ ಮಂತ್ರದ ಬಲ.

ನೆಟಾಲಿನ ಹೈಕೋರ್ಟಿನಲ್ಲೊಂದು 'ಕೇಸು' ವಿಚಾರಣೆಗೆ ಬಂತು. ಒಬ್ಬ ಮನುಷ್ಯನನ್ನು ಕೊಂದು ಅತನ ಕಳೇಬರದಿಂದ ಒಂದು ಮದ್ದನ್ನು ತಯಾರಿಸಿದನೆಂಬ ಆಪಾದನೆಯ ಮೇಲೆ ಓರ್ವ ಪೂಟಗಾರನನ್ನು ನ್ಯಾಯಾಧೀಶರ ಮುಂದೆ ತಂದು ನಿಲ್ಲಿಸಲಾಯಿತು.

ವಿಚಾರಣೆಯ ಸಮಯದಲ್ಲಿ ಆಪಾದಿತನು ಏನಾದರೂ ಹೇಳುವುದಿದೆಯೇ ಎಂಬದಾಗಿ ನ್ಯಾಯಾಧೀಶರು ವಿಚಾರಿಸಿದರು. ಆ ಸಮಯದಲ್ಲಿ ಆಪಾದಿತನು ಮನಸಿನಲ್ಲಿ ಏನೋ ಗೊಣಗುಟ್ಟಿದನು. ಒಡನೆ ನ್ಯಾಯಾಧೀಶರು ಬೋಧ ತಪ್ಪಿ ತನ್ನ ಪೀಠದಿಂದ ಕೆಳಕ್ಕುರುಳಿದರು. ಮತ್ತು ಸ್ವಲ್ಪ ಸಮಯದಲ್ಲಿ ಮೃತಿಯೆನ್ನೈದಿದರು.

—೦೦—

ದೇವರಿಗೆ ಕಾಗದ ಬರೆದ-5 ಪೌಂಡು ಪಡೆದ.

ಇಟೆಲಿಯ ಆಂಚೆ ಕಚೇರಿಯೊಂದರಲ್ಲಿ 'ಸಾರ್ಟರು' ಗಳಿಗೆ ಒಂದು ಕಾಗದವನ್ನು ಕಂಡು ಆತ್ಯಾಶ್ಚರ್ಯವಾಯಿತು. ದೇವರಿಗೆಂದು ಆ ಕಾಗದದಲ್ಲಿ ಸೂಚಿತವಾಗಿತ್ತು. ಪೋಸ್ಟ್ ಮಾಸ್ಟರು ಆ ಕಾಗದವನ್ನು ಒಡೆದು ನೋಡಿ, ಯಾವನೋ ಬಡವನು ತನ್ನ ಬಡತನದ ದೆಸೆಯಿಂದ ದೇವರಲ್ಲಿ ಈ ಮೂಲಕ 10 ಪೌಂಡುಗಳ ಸಹಾಯಕ್ಕೆ ಮೊರೆ ಇಟ್ಟಿರುವುದನ್ನು ನೋಡಿ ಇದನ್ನು ಧಾರ್ಮಿಕ ಸಂಸ್ಥೆಯೊಂದಕ್ಕೆ ಕಳುಹಿಸಿದರಂತೆ. ಅವರು 5 ಪೌಂಡುಗಳನ್ನು ಆತನಿಗೆ ಕಳುಹಿಸಿದರಂತೆ. ಆತನು ಉತ್ತರ ಕೊಡುತ್ತಾ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿ, ಆಕಾಶರಾಯನಿಗೆ ಎಚ್ಚರಿಕೆ ಕೊಡುತ್ತ ಈ ಸಣ್ಣ ಕೆಲಸಕ್ಕೆ ಶೇಕಡ 50ರಷ್ಟು ಕಮಿಷನ್ ತೆಗೆದುಕೊಳ್ಳುವುದು ನಿನಗುಚಿತವಲ್ಲವೆಂದು ತಿಳಿಸಿದನಂತೆ. ಪಾಪ! ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಿಗೆ ಹೋಗಿ ಮೊಳಹಾಕಿದಂತಾಯಿತು!

—೦೦—

ಸರ್ವನಾಶಕ ಕಿರಣ.

ವಿಚಿತ್ರವಾದೊಂದು ಕಿರಣವನ್ನು ಮಿ. ಆರ್ಥರ್ ಕೊಕ್ಸ್ ಎಂಬವರು ಶೋಧಿಸಿರುವರು. ಇದರಿಂದಾಗಿ ಇನ್ನು ಮುಂದೆ ಯುದ್ಧಗಳೇ ಸಂಭವಿಸಲಿಕ್ಕಿಲ್ಲವೆಂದು ಅವರು ಅಭಿಪ್ರಾಯಪಡುತ್ತಿರುವರು.

ಈ ಕಿರಣವು ಸರ್ವ ನಾಶವನ್ನು ಮಾಡಬಲ್ಲುದಲ್ಲದೆ ನೂರಾರು ಮೈಲುಗಳ ತನಕ ಭರದಿಂದ ಗುಳಿ ಬೀಳುವಂತೆಯೂ, ಗಾಳಿ ಬೀಸುವಂತೆಯೂ ಮಾಡಬಲ್ಲುದು. ಆ ಯಂತ್ರವು ಸೂರ್ಯನ ಕಿರಣಗಳನ್ನು ಸಂಗ್ರಹಿಸುತ್ತದೆ. ಆದರ ಉಪಯೋಗದಿಂದ ಒಂದು ಹಡಗಕ್ಕೆ ಉಪಯೋಗಿಸಿರುವ ಕಬ್ಬಿಣವನ್ನು ಎಷ್ಟು ಬಿಸಿ ಮಾಡಲು ಸಾಧ್ಯವಿದೆಯೆಂದರೆ, ಅದರ ಶಾಖದಿಂದ ಹಡಗವ ಮೇಲಿರುವ ಜನರೆಲ್ಲರೂ ಸಾಯುವಂತೆ ಮಾಡಬಹುದು. ಅದರಲ್ಲಿರುವ ಸಿಡಿ ಮದ್ದುಗಳು ತನ್ನಷ್ಟಕ್ಕೆ ಸಿಡಿಯುವಂತೆ ಮಾಡಬಹುದು.

ಒಂದು ವಿಮಾನದ ಮೇಲೆ ಈ ಕಿರಣವು ಬೀಳುವಂತೆ ಮಾಡಿದರೆ ಅದೊಂದು ಕೀಟವಂತೆ ಸುಟ್ಟು ಬೂದಿಯಾಗುವುದಂತೆ. ಮನುಷ್ಯ ವರ್ಗದ ನಾಶವನ್ನು ಸಾಧಿಸುವುದಕ್ಕಾಗಿ ನಾನದನ್ನು ಉಪಯೋಗಿಸಲಿಚ್ಛಿಸುವುದಿಲ್ಲವೆಂದೂ, ಅವರ ಬೆದರಿಕೆಯಿಂದಾಗಿ ಇನ್ನು ಮುಂದೆ ಯುದ್ಧಗಳೇ ಸಂಭವಿಸದಿರಬಹುದೆಂದೂ ಈ ನೂತನ ಯಂತ್ರಶೋಧಕರೆನ್ನುತ್ತಿರುವರು.

—೦೦—

ಚಲಿಸುವ ಮನೆಗಳು.

ಚಲಿಸುವ 'ಬೀಡಾ ಬೀಡಿ' ಆಂಗಡಿಗಳನ್ನು ನಮ್ಮ ದೇಶದಲ್ಲಿ ನಾವು ಕಂಡಿರುವೆವು. ಆದರೆ ಪೊಸ್ಕಿನ ನಗರದಲ್ಲಿ ದೊಡ್ಡ ದೊಡ್ಡ ಆರಮನೆಗಳೇ ಚಲಿಸುತ್ತಿರುವುವಂತೆ. ಪೊನ್ನೆ ಏದು ಮಾಳಿಗೆಗಳಿರುವ 23 ಸಾವಿರ ಟನ್ ಭಾರವಿರುವ ಒಂದು ಮನೆಯು ಆರು ಗಂಟೆಗಳಲ್ಲಿ 150 ಅಡಿಗಳ ದೂರ ಚಲಿಸಿತಂತೆ. - ಅದರೊಳಗೆ 400 ಮಂದಿ ಜನರಿದ್ದರು. ಆದರೆ ಈ ಚಲನೆಯಿಂದಾಗಿ ಅವರಿಗೆ ಯಾವ ತರದ ತೊಂದರೆಯೂ ಉಂಟಾಗಲಿಲ್ಲ.

—೦೦—

ನೋವಿಲ್ಲದ ದಂತವೈದ್ಯ.

20 ವರ್ಷಗಳ ಕಾಲ ಬಿಡುವಿಲ್ಲದೆ ಸಂಶೋಧನೆ ನಡೆಸಿ ಕೊಲಂಬಿಯಾ ವಿಶ್ವವಿದ್ಯಾನಿಲಯದ ದಂತ ವಿಜ್ಞಾನಿಗಳಾದ ಡಾ. ಲಿರಂಯ್ ಹಾರ್ಟಮನ್ ಎಂಬವರು 'ಡಿಸೆನ್ಸಿಟೈಸರ್' ಎಂಬ ವಸ್ತುವನ್ನು ಕಂಡುಹಿಡಿದಿದ್ದಾರೆ. ವಸ್ತುವನ್ನು ಹಲ್ಲಿನ ಮೇಲ್ಭಾಗಕ್ಕೆ ಎರಡು ನಿಮಿಷಗಳ ಕಾಲ ಸವರಿದರೆ 60 ನಿಮಿಷಗಳ ವರೆಗೆ ಹಲ್ಲಿನ ಸುತ್ತು ನೋವು ಸತ್ತು ಚಿಕಿತ್ಸೆ ಬಹಳ ಸುಲಭವಾಗುವುದು. ಎಂಥಾ ಡೊಗರನ್ನಾದರೂ ಈ ಒಂದು ಗಂಟೆಯೊಳಗಾಗಿ ಚಿನ್ನ ಅಥವಾ ಬೆಳ್ಳಿಯ ಪುಡಿಯಿಂದ ಭರ್ತಿ ಮಾಡಬಹುದು.

ಈ ಒಂದು ಗಂಟೆಯ ಚಿಕಿತ್ಸೆಯು ಸಾಲದೆ ಹೋಗಿ ಬಹು ಆಳವಾದ ಡೊಗರನ್ನು ಭರ್ತಿ ಮಾಡಬೇಕಾದಾಗ 'ನೋವೋಕೈನ್' ಎಂಬ ವಸ್ತುವನ್ನು ಪ್ರಯೋಗಿಸಲಾಗುವುದು. ಆಗ ಹಲ್ಲಿನ ಸುತ್ತಣ ಪ್ರದೇಶ 'ಜ್ಞಾನಾನಸವೃಶ'ವಾಗುವುದು. ಆ ಮೇಲೆ ದಂತ ಚಿಕಿತ್ಸೆಯನ್ನು ನಿರಾಯಸವಾಗಿ ಮಾಡಬಹುದು.

ಹಲ್ಲನ್ನು ಕೀಳಬೇಕಾದಾಗ, ಆಧುನಿಕ ದಂತ ವಿಜ್ಞಾನಿಯು 'ಇಲ್‌ಪೆಯಿನ್' ಎಂಬ ವಸ್ತುವನ್ನು ಪ್ರಯೋಗಿಸುವನು. ಈ ವಸ್ತುವು ಅತ್ಯಂತ ಹೊಸ ಸಂಶೋದನಾನಾತಿನಿ. ಈ ವಸ್ತು ಪ್ರಯೋಗದಿಂದ ಹದಿನೈದು ನಿಮಿಷಗಳೊಳಗಾಗಿ ಗಾಢ ನಿದ್ರೆ ಬಂದು ಬಿಡುತ್ತದೆ. ಸರಿ, ವೈದ್ಯನಿಗೆ ತಕರಾರೇ-ಇಲ್ಲ!

ಈ ವಸ್ತುಗಳಿಂದ ಆ ಮೇಲೆ ರೋಗಿಗೆ ಯಾವ ಅಪಾಯವೂ ಸಂಭವಿಸುವುದಿಲ್ಲವಂತೆ.

—೦೦—

ಹಸ್ತ ಸ್ಪರ್ಶದಿಂದ ರೋಗ ಪಾಸು.

ಫ್ರಾನ್ಸಿನ ಕಾಯರ್‌ಫೊಂಟ್ ಎಂಬ ಊರಿನಲ್ಲಿ ಒಬ್ಬ ಹುಡುಗಿ ಇರುವಳು. ಅವಳಿಗೊಂದು ಅದ್ಭುತ ಶಕ್ತಿ ಇದೆ. ಈ ಅದ್ಭುತ ಶಕ್ತಿಯನ್ನು ಕಂಡುಕೊಳ್ಳುವ ಏಳು ತಿಂಗಳ ಮೊದಲು ಹಲದಿನ ಮಲಗುವದೇ ಸಾಧ್ಯವಾಗಲಿಲ್ಲ. ಅವಳು ಒಮ್ಮೊಮ್ಮೆ ಕುರ್ಚಿಯಲ್ಲಿ ಕೂಡ್ರುವಳು. ಒಮ್ಮೊಮ್ಮೆ ಹಾಸಿಗೆಯಲ್ಲಿ ಬೀಳುವಳು. ಆದರೆ ಕಣ್ಣು ರೆಪ್ಪೆ ಮುಚ್ಚುತ್ತಿರಲಾಗಲಿಲ್ಲ. ಅವಳು ಅತೀವ ಅಶಕ್ತಳಾದಳು; ಅವಳ ಕಾಯಿಲೆಯ ಕಾರಣವನ್ನು ಡಾಕ್ಟರರು ಕಂಡು ಹಿಡಿಯಲಾರದಾದರು. ಒಂದು ದಿನ ಅವಳ ನೆರೆಮನೆಯ ಕಾಯಿಲೆಬಿದ್ದ ಒಬ್ಬಾಕೆ ಅವಳನ್ನು ನೋಡಬಂದಳು. ಆಗ ಹಠತ್ತಾಗಿ ಈಕೆಯು ಅವಳನ್ನು ಸ್ಪರ್ಶಿಸಿದಳು. ಕೂಡಲೇ ಈ ಸಂದರ್ಶನವನ್ನು ತಾಕಿದ ಕೆಯ ಕಾಯಿಲೆಯು ಗುಣವಾಯಿತು. ಅಂದಿನಿಂದ ಅವಳಿಗೆ ಸರಿಯಾಗಿ ನಿದ್ದೆ ಬರತೊಡಗಿತು. ಅವಳ ಕೀರ್ತಿಯು ನಾಲ್ಕು ಕಡೆಗೂ ಹಬ್ಬಿತು. ಅವಳಿದ್ದಲ್ಲಿಗೆ ಚಿಕಿತ್ಸೆಗಾಗಿ ಅನೇಕರು ಬರತೊಡಗಿದರು. ಕೆಲವು ಮಂದಿ ಡಾಕ್ಟರರು ಕೂಡ ತಮ್ಮ ಕಾಯಿಲೆಯ ಬಿಡುಗಡೆಗಾಗಿ ಬರುವದಿತ್ತು. ಕಾಯಿಲೆಗೆ ಬಲಿ ಬಿದ್ದ ನೂರಾರು ಬಡ ಒಕ್ಕಲಿಗರು, ಹಲವು ಶ್ರೀಮಂತರು, ಕಲಾವಿದರು, ಕವಿಗಳು ಮತ್ತು ಕೆಲ ವೈದ್ಯರೂ ಕೂಡ ಈಕೆಯ ಸ್ಪರ್ಶ ಮಾತ್ರದಿಂದ ಗುಣ ಹೊಂದುತ್ತಿದ್ದರು. ಇವಳು ಬೇರೆ ಜನರನ್ನು ಗುಣಪಡಿಸುವುದು ಹೆಚ್ಚಿದಂತೆ, ಅವಳ ಆರೋಗ್ಯವೂ ವೃದ್ಧಿ ಹೊಂದಿತು.

—೦೦—

ಃಃ ದೇವದತ್ತ. ಃಃ

ಸಾಮಾಜಿಕ ಕಾದಂಬರಿ.

(ಕಳೆದ ಸಂಚಿಕೆಯಿಂದ ಮುಂದುವರಿದದ್ದು.)

೧೪ ನೇ ಅಧ್ಯಾಯ.

ಕಮಲೆಯು ವಿಸ್ಮಯಳಾಗಿ ಕೇಳುತ್ತಿದ್ದಳು. ಆವಳಿಗೆ ಏನೂ ತಿಳಿಯಲಿಲ್ಲ 'ಕಡೆಯ ನೀಚದಾರಿ' ಎಂದೊಡನೆ ಅವಳು ನಡುಗಲಾರಂಭಿಸಿದಳು. ಆವರೂ ತನ್ನ ಹೆದರಿಕೆಯನ್ನು ಮರೆಮಾಚಿ, ದೀನಸ್ವರದಿಂದ 'ಅಣ್ಣಾ! ಏನು ಮಾಡಿರುವೆ? ದಯವಿಟ್ಟು ನನ್ನನ್ನು ಹೆದರಿಸಬೇಡ, ನನ್ನ ಪೆಟ್ಟಿಗೆ ಎಲ್ಲಿ?'

ವಸಂತ–ಪುನಃ ಅಣ್ಣನೆ? ನಿನಗೆ ಕರುಣೆಯಾದರೂ ಇಲ್ಲವೆ? ಪೆಟ್ಟಿಗೆಯು ಇಲ್ಲಿ ಇದೆ. ಬಂಡಿಯ ಹಿಂಭಾಗದಲ್ಲಿ. ನಾ ನೇನು ಇಷ್ಟರ ವರೆಗೆ ಏನೊಂದೂ ನೀಚ ವರ್ತನೆಯನ್ನು ಎಸಗಲಿಲ್ಲ. ನೀನಿನ್ನೂ ಚಂಡಿಹಿಡಿದದ್ದಾದರೆ ನಾನು ನೀಚನಾಗಲೇ ಬೇಕಾಗುತ್ತೆ. ಈಗ ನಡೆದ ಸಂಗತಿ ಇಷ್ಟೆ ನಿನ್ನನ್ನು ಸಮಾಧಾನದಿಂದ ಲ್ಲದಿದ್ದರೆ ಉಪಾಯದಿಂದ, ತಪ್ಪಿದರೆ ಬಲತ್ಕಾರದಿಂದಲಾದರೂ ನನ್ನವಳನ್ನಾಗಿ ಮಾಡಿಯೇ ತೀರಬೇಕೆಂಬುವುದು ನನ್ನ ಹಟವಾಗಿದೆ. ಇದಕ್ಕಾಗಿ ನಾನು ಕಾಮವತಿಯೊಡನೆ ಈ ಕೃತ್ಯವನ್ನೆಸಗಿದೆನು. ನೀನು ಈ ದಿವಸ ನಿನ್ನ ಆಜ್ಜಿ ಮನೆಗೆ ಹೊರಡುವುದು ನನಗೆ ಗೊತ್ತಿತ್ತಷ್ಟೆ. ಈ ಸಮಯದಲ್ಲಿ ನಿನ್ನನ್ನು ಮೋಸದಿಂದ ದಾರಿತಪ್ಪಿಸಿ ಬೊಂಬಾಯಿಗೆ ಕರಮೊಯ್ದು ಅಲ್ಲಿ ನಿನ್ನ ಸಮ್ಮತಿಯನ್ನು ಪಡೆದು ಲಗ್ನಮಾಡಿಕೊಳ್ಳಬೇಕೆಂದು, ಬಗೆದು ಈಗ ನಿನ್ನನ್ನು ಇಲ್ಲಿಗೆ ತಂದಿರುವೆನು. ಇಗೋ ಈಗ ಹನ್ನೆರಡು ಗಂಟೆಗೆ ಸರಿಯಾಗಿ ಸ್ಟೀಮರು ಹೊರಡುತ್ತೆ. ಎರಡು ಟಿಕೇಟು ಈಗಾಗಲೇ ಕೊಂಡುಕೊಂಡಿರುತ್ತೇನೆ. ಇನ್ನಿರುವುದೊಂದೆ 'ನಿನ್ನ ಸಮ್ಮತಿ.' ಕಮಲೆಗೆ ಇನ್ನೂ ತಾನೆಲ್ಲಿರುತ್ತೇನೆಂಬ ಸಂಗತಿಯು ತಿಳಿಯಲಿಲ್ಲ. ಆವಳಿಗೆ ಬಹು ಭಯವಾಯಿತು. ಮಾತಾಡುತ್ತಿದ್ದ ಹಾಗೆ ವಸಂತನ ಮುಖವು ಕ್ರಮಕ್ರಮವಾಗಿ ಸಿಟ್ಟೇರುವಂತಿತ್ತು. ಈ ಸಮಯದಲ್ಲಿ ಸ್ವಲ್ಪ ಉಪಾಯ ತತ್ಪರಳಾಗಿರಬೇಕೆಂದು ಭಾವಿಸಿ ಕಮಲೆಯು ಸ್ವಲ್ಪ ಹಸನ್ಮುಖಳಾಗಿ 'ಹಾಗಾದರೆ ನಾವೀಗ ಇರುವುದೆಲ್ಲಿ? ಕಾಮವತಿ ಏನಾದಳು?' ಎಂದಳು. ವಸಂತನಿಗೆ ಪರಮಾನಂದವಾಯಿತು. 'ಕಮಲಾ! ನೀನೂ, ಕಾಮವತಿಯೂ ಬಂಡಿಯನ್ನೇರುವುದಕ್ಕೆ ಮೊದಲೆ ಸ್ವಲ್ಪ ಕಾಫಿ ಕುಡಿದಿರಷ್ಟೆ. ಆ ಕಾಫಿಯಲ್ಲಿ ಒಂದು ತರಹದ ನಿದ್ರೆ ಹೋಗತಕ್ಕ ಔಷಧಿಯನ್ನು ಅವಳು ಮಿಶ್ರಮಾಡಿದ್ದಳು. ಬಂಡಿಯನ್ನೆಡರಿ ಸ್ವಲ್ಪ ಮುಂದೆ ಬರುವುದರೊಳಗಾಗಿ ನಿನ್ನ ಸ್ಮೃತಿ ತಪ್ಪಿ ನಿದ್ದೆ ಹೋದೆ. ಆ ಮೇಲೆ ಬಂಡಿಯೊಳು ಮೋಟಾರನ್ನು ಹಿಂದಕ್ಕೆ ತಂದನು. ಕಾಮವತಿಯು ಹಿಂದಕ್ಕೆ ನಿಂತಳು. ನಾನು ಕಾರನ್ನು ನಡೆಸುತ್ತಾ ನಿನ್ನನ್ನು ಇಲ್ಲಿಗೆ ತಂದಿರುವೆನು. ಇದೇ ರೇವೆ ಪಟ್ಟಣ. ಇಷ್ಟೇ ನಡೆದ ಸಂಗತಿ. ಈಗ ಇಲ್ಲಿ ಹತ್ತಿರದಲ್ಲಿರುವ ಹೊಟೇಲಿನಲ್ಲಿ ನನ್ನ ಮೋಟಾರನ್ನು ಬಿಡುತ್ತೇನೆ. ನಾಳೆ ಆಳು ಬಂದು ಅದನ್ನು ತೆಗೆದುಕೊಂಡು ಹೋಗುವನು. ಏನು ಹೊರಡುವುದರ ವಿಷಯ?' ಎಂದು ಕೈಗಡಿಯಾರವನ್ನು ನೋಡಿ 'ಸಮಯವು ಮೀರುತ್ತಾ ಬಂತು' ಎಂದನು.

ಕಮಲೆಗೆ ಈಗ ಆವಳ ನಿಜಸ್ಥಿತಿಯು ತಿಳಿಯಿತು. ವಸಂತ ಮದನನು ಇಷ್ಟು ಸಾಧುಸಜ್ಜನನಂತೆ ಮಧುರವಾಗಿ ಮಾತಾಡುತ್ತಿದ್ದರೂ ಅವನೆಂತಹ ಪೈಶಾಚಿಕ ನಡತೆಯ ಅಧಮನೆಂಬುವುದು ಆವಳಿಗೆ ಚೆನ್ನಾಗಿ ಗೊತ್ತಿತ್ತು. ರೇವೆ ಪಟ್ಟಣದಲ್ಲಿ ಆವಳಿಗೆ ತಿಳಿವ ನೆಂಟರಿಷ್ಟರಾರೂ ಇರಲಿಲ್ಲ. ಸ್ವಲ್ಪ ಹೊತ್ತು ಆವಳಿಗೆ ಏನೊಂದು ಮಾತಾಡಲೂ ದಾರಿ ತೋರಲಿಲ್ಲ. ಆವಳ ಸ್ಥಿತಿಯನ್ನೂ, ವಸಂತನ ನಿರ್ಧಾರ ಮುಖವನ್ನೂ ನೋಡಿದೊಡನೆ ಅವಳ ಹೃದಯವು ಬಹಳವಾಗಿ ದಡಬಡಿಯಲಾರಂಭಿಸಿತು. ಆವಳು ಹಟತ್ಕಾಗಿ ಎದ್ದಳು. ಆವಳ ಪೆಟ್ಟಿಗೆಯಲ್ಲಿ ತಂದೆಯು ಬರೆವ ವಿಲ್ಲು ಇತ್ತು. ಈಗ ತಾನು ಸಂಪೂರ್ಣವಸಂತನ ವಶದಲ್ಲಿರುವೆನೆಂಬ ತಿಳಿದ ಕೂಡಲೆ ಆವಳ ಅಂಗಾಂಗಗಳು ಒಂದೇ ಸವನೆ ಕಂಪಿಸಲಾರಂಭಿಸಿದವು. ' ಆವಳು ಬಂಡಿಯಿಂದ ಕೆಳಗಿಳಿಮು ವಸಂತನ ಪಾದದಲ್ಲಿ ಮೊಣಕಾಲೂರಿ, ತನ್ನ ಕೈಗಳನ್ನು ಜೋಡಿಸಿ, 'ಅಣ್ಣಾ! ನೀನು ನನಗೆ ತಂದೆಯಲ್ಲದೆ ಮತ್ತೊಬ್ಬನಲ್ಲ. ದಯವಿಟ್ಟು ಆನಾಥಳಾದ ನಿನ್ನ ಮಗಳನ್ನು ಕಾಪಾಡು' ಎಂದು ಪಾದಾವನತಳಾದಳು.

ವಸಂತನ ಮುಖವು ಸಿಟ್ಟಿನಿಂದ ಕೆಂಪೇರಿತು. 'ಏನು! ಇನ್ನೂ ನಿನ್ನ ಚಂಡಿತನವೇ? ಕಮಲಾ ನನ್ನ ನಿರ್ಧಾರನನ್ನು ದಯವಿಟ್ಟು ಕೇಳು. ನೀನು ನನ್ನ ಸಹಧರ್ಮಿಣಿಯಾಗಿ ಸುಖಿಸಬೇಕು. ಇಲ್ಲವೇ ಇದು ನಿನ್ನ ಜೀವನದ ಅಂತ್ಯದ ದಿನವಾಗಬೇಕು' ಎಂದು ಜೇಬಿನಿಂದ ತುಂಬಿದ ರಿವಾಲ್ವರನ್ನು ತೆಗೆದು 'ಏಳು ನಿನ್ನ ಮರಣವು ನನ್ನ ಜೀವನಕ್ಕೆ ಹಾನಿಯನ್ನುತರುವಂತಿದ್ದರೆ, ಈ ಭಗ್ನವಾದ ಜೀವವನ್ನು ನಂದಿಸಲು ನನಗೇನೂ ವ್ಯಸನವಿಲ್ಲ' ಬೇಡಿಕಾಡಿ ಸಾಕಾದೆನು. ನನಗೆ ವಿಶ್ವರ್ಯವು ಕಡಮೆಯೇ? ವಿದ್ಯೆ ಇಲ್ಲವೇ? ನನ್ನ ಶತ್ರುಗಳು ಕೆಲವರು ನನ್ನ ಮೇಲಿನ ಅಸೂಯೆಯಿಂದ, ಏನೇನೋ ಇಲ್ಲದ ಸಲ್ಲದ ಆರೋಪಣೆಗಳನ್ನು ನನ್ನ ನಡತೆಯ ವಿಷಯ ಹಬ್ಬಿಸಿರುವರೆಂದರೆ, ನಿನಗೆ ನನ್ನಲ್ಲಿ ಆಷ್ಟೊಂದು ಅಸಂಧತೆಯೇ? ಪುನಃ ಹೇಳುತ್ತೇನೆ. ಇದು ಕಡೆಯ ಮಾತು. ದಯವಿಟ್ಟು ಪರಿಣಾಮವನ್ನು ಯೋಚಿಸಿ ಒಡಂಬಡು. ನಿನ್ನನ್ನು ನಾನೆಂದೂ ದುಃಖಕ್ಕೆ ಗುರಿಮಾಡಲಾರೆ. ನನ್ನ ಜೀವನದ ಆರಾಧ್ಯ ದೇವತೆಯ ಮೂರ್ತಿಯಂತೆ ಪೂಜಿಸುವೆನು. ದಯವಿಟ್ಟು ಸಮ್ಮತಿಸು. ಇಲ್ಲದಿದ್ದರೆ ನೀನು ನಿನ್ನ ಚಂಡಿತನದಿಂದ ನನ್ನನ್ನು ಕೇವಲ ಅಮಾನುಷ ಕೃತ್ಯಕ್ಕೆ ನೂಕಿದಂತಾಗುವುದು. ಏಳು' ಎಂದು ಕಮಲೆಯ ತೋಳಿಡಿದು ಎಬ್ಬಿಸಲು ಬಗ್ಗಿದನು.

ಕಮಲೆಗೆ ತಾನು ಯಮದೂತನ ಎದುರಿನಲ್ಲಿರುವೆನೆಂಬ ಸಂಗತಿಯು ತಿಳಿದಿದ್ದರೂ ಸಹ, ವಸಂತನ ಕೈಮುಟ್ಟಲು ಮನ ಒಡಂಬಡಲಿಲ್ಲ. ಆವಳು ಕಡೆಗೆ ಪ್ರಾಣವನ್ನಾದರೂ ಬಿಡಲು ನಿರ್ಧರಿಸಿದಳು. ಆದುದರಿಂದ ತಟ್ಟನೆ ಎದ್ದು ಗಂಭೀರವಾಗಿ, 'ನೀನು ಸತ್ಕುಲ ಪ್ರಸೂತನು' ಆಬಲೆಯಾದ ನನ್ನನ್ನು, ಈ ನಿರ್ಜನ ಪ್ರದೇಶದಲ್ಲಿ ಬಲಾತ್ಕರಿಸುವುದು ಎಷ್ಟು ಆಯೋಗ್ಯವಾದ ಕೆಲಸವೆಂಬುದನ್ನು ನೀನೇ ಯೋಚಿಸು. ಆದರೆ ಈ ಮೋಸದಲ್ಲಿ ನನಗೆ ಸಮ್ಮಂಧ ಪಟ್ಟವರೆಂದೆನಿಸಿಕೊಂಡವರೆಲ್ಲಾ ಭಾಗಿಗಳಾಗಿರುವಾಗ ಇನ್ನು ನನಗೆ ನೆಲೆಯಾವುದು. ಅಯ್ಯೋ ನನ್ನ ಹೆತ್ತ ತಂದೆ ತಾಯಿಯಂದರಿದ್ದಿದ್ದರೆ ಈ ಕಷ್ಟವು ನನಗಿತ್ತೇ? (ಕಣ್ಣೀರು ಸುರಿಸುತ್ತಾ) ತಾಯಿ ಇಲ್ಲದೆ ಮಲತಾಯಿಯರ ವಶದಲ್ಲಿರತಕ್ಕ ಅನಾಥ ಮಕ್ಕಳ ಪಾಡೆಲ್ಲಾ ಹೀಗೆಯೇ ಇರಬಹುದು. ಆದರೆ ಭಗವಂತನು ಆ ನಾಥರಕ್ಷಕನು. ಅಬಲೆಯರನ್ನು ಅವನೆಂದೂ ಕಷ್ಟಕ್ಕೀರಿಸನ್ನು. ಆದುದರಿಂದ ನಾನು ಧೈರ್ಯವಾಗಿಯೂ ಹೇಳುತ್ತೇನೆ. ನನ್ನೆ ಪ್ರಾಣವನ್ನಾದರೂ ನೀನು ತೆಗೆಯಬಹುದು. ಆದರೆ ನಾನೆಂದೂ ನಿನ್ನ ಪತ್ನಿಯಾಗಲು ಚಪ್ಪಲಾರೆ' ಎಂದಳು.

ವಸಂತ ಮದನನ ಶರೀರವು ಸಿಟ್ಟಿನಿಂದ ನಡುಗಲಾರಂಭಿಸಿತು. ಆವನ ಪಾಷಾಣ ಹೃದಯವು ಎಳ್ಳಷ್ಟು ಕರಗಲಿಲ್ಲ. ಆದರ ಬದಲು ಆವನ ಮನಸಿನಲ್ಲಿ ಬಹು ಹೇಯವಾದ ಮತ್ತೊಂದು ಪೈಶಾಚಿಕ ಭಾವನೆಯು ಮೈದೋರಿತು. ಕೂಡಲೆ ಆವನು 'ಕಮಲಾ, ನಿನ್ನ ಕಡೆಗಾಲವು ಬಂತೆಂದು ತಿಳಿ. ಆದರೆ ನಿನ್ನನ್ನು ಕೊಲ್ಲುವುದಕ್ಕೆ ಮೊದಲು ನಿನ್ನೊಡನೆ ಒಮ್ಮೆ ಸುಖಿಸಿ, ಆ ಮೇಲೆ ಆ ಘೋರಕೃತ್ಯಕ್ಕೆ ಕರಗುವೆನು. ಈಗ ಮರುಮಾತಾಡದೆ ಆ ಹತ್ತಿರದ ಮರದ ನೆರಳಿಗೆ ನಡೆ, ಕೂಗಿದೆ ಎಂದರೆ, ಸಮುದ್ರದ ಈ ಘೋಷದಲ್ಲಿ ಅದರಿಂದ ಪ್ರಯೋಜನವೇನೂ ಇಲ್ಲ. ಆದುದರಿಂದ ನಡೆ' ಎಂದು ರಿವಾಲ್ವರನ್ನು ಎಡದ ಕೈಯಲ್ಲಿ ಹಿಡಿದು ತನ್ನ ಬಲಗೈಯಿಂದ ಆವಳ ತೋಳ್ಬಳ್ಳಿಡಿದು, ಹತ್ತಿರದ ನುರದ ಬುಡನಲ್ಲಿನ ಆಸನಕ್ಕೆ ಬಲತ್ಕಾರದಿಂದ ಎಳೆದನು. ಕಮಲೆಯು ಆಯ್ಯೋ ಭಗವಂತಾ! ನನ್ನನ್ನು ಪಾಪಾಡುವವರು ಯಾರೂ ಇಲ್ಲವೇ' ಎನ್ನುವಷ್ಟರಲ್ಲಿ, 'ಹೆದರಬೇಡ. ಬಂದೆ,' ಎನ್ನುತ್ತಾ ಮರದ ನೆರಳಿನಲ್ಲಿದ್ದ ಯುವಕನು ನೆಗೆದು ವಸಂತನ ಕೈಯಲಿದ್ದ ರಿವಾಲ್ವರನ್ನು ಎಳೆದು ಆವನ ವಕ್ಷಸ್ಥಳಕ್ಕೆ ಬಲವಾದ ಒಂದು ಗುದ್ದನ್ನು ಕೊಟ್ಟು ಕಮಲೆಯನ್ನು ಆವನ ಕೈಯಿಂದ ಬಿಡಿಸಿದನು.

ದೈವ ಸಹಾಯದಂತೆ ಉದ್ಭವಿಸಿದ ಮನುಷ್ಯ ಮೂರ್ತಿಯನ್ನು ಕಂಡೊಡನೆ, ವಸಂತ ಮದನನು ಬೆಪ್ಪಾಗಿ ಹಿಂಜರಿದನು. ಕಮಲೆಯು ಮೂರ್ಛಿತಳಾದಳು.

ಆಗಂತುಕನು ಕಮಲೆಯನ್ನು ಎತ್ತಿ ಆಸನದ ಮೇಲೆ ಮಲಗಿಸಿ, ವಸಂತನನ್ನು ನೋಡಿ, 'ನೀಚ, ನಿನ್ನನ್ನು ಈಗಲ್ಕೇ ಪೊಲೀಸ್ ವಶಕೊಪ್ಪಿಸುವೆನು. ಅನಾಥೆಯ್ಯೂ, ಅಬಲೆಯೂ ಆದ ಕುಲಸ್ತ್ರೀಯನ್ನು ಬಲತ್ಕರಿಸುವುದು ನಿನ್ನಂಥವನಿಗೆ ಯೋಗ್ಯವೇ,' ಎನ್ನುವಷ್ಟರಲ್ಲಿ ಕಮಲೆಯು ಚೇತರಿಸಿ ಎಚ್ಚೆತ್ತಳು. ಬದಿಯಲ್ಲಿ ನಿಂತಿದ್ದ ಯುವಕನನ್ನು ವಸಂತನೆಂದು ತಿಳಿದು, 'ಅಣ್ಣಾ! ದೂರ ನಿಲ್ಲು. ನನ್ನ ಪಾತಿವ್ರತ್ಯವನ್ನು ಕೆಡಿಸಿದೆಯೂ' ನೋಡುವುದೇನು? ದಯವಿಟ್ಟು ನಿನ್ನ ರಿವಾಲ್ವರಿಗೆ ನನ್ನನ್ನು ಬಲಿಕೊಡು' ಎನ್ನುತ್ತಾ ಎದ್ದು ನಿಂತು ಇಬ್ಬರು ಮನುಷ್ಯ ಮೂರ್ತಿಗಳನ್ನು ಕಂಡು ವಿಸ್ಮಯಳಾಗಿ ಯುವಕನನ್ನು ನೋಡತೊಡಗಿದಳು.

ಯುವಕ–'ಕಮಲಾ! ಆ ನೀಚನಿಗಾಗಿ ನೀನಿನ್ನು ಹೆದರಬೇಕಾಡ ಆವಶ್ಯವಿಲ್ಲ. ನಿನ್ನ ಧರ್ಮವನ್ನು ಕೆಡಿಸಲು ನಾನವನನ್ನು ಬಿಡಲಿಲ್ಲ' ಎಂದನು.

ಕಮಲೆ (ಬಿಕ್ಕುವ ಸ್ವರದಿಂದ) 'ಮಹಾಶಯಾ' ನೀವು ಯಾರೇ ಇರಬಹುದು. ನನ್ನನ್ನು ದಯವಿಟ್ಟು ಹತ್ತಿರದ ಒಂದು ಮನೆಗೆ, ಕರೆದೊಯ್ಯಿರಿ. ನನಗೆ ಇಲ್ಲಿರಲು ಬಹು ಹೆದರಿಕೆಯಾಗುತ್ತದೆ' ಎಂದಳು.

ವಸಂತ ಮದನನು ದೈವಸಹಾಯದೋಪಾಯದಲ್ಲಿ ಉದ್ಭವಿಸಿದ ಆಗಂತುಕನನ್ನು ಕಂಡೊಡನೆ ಗಾಬರಿಯಾಗಿ ವಸಂತನನ್ನಾಚರಿಸಿ, ಆವನನ್ನೇ ಎಲ್ಲೆ ಇಕ್ಕಡೆ ನೋಡುತ್ತಿದ್ದನು. 'ಈ ವ್ಯಕ್ತಿಯು ಯಾರೇ ಇರಲೀ ಕಮಲೆಯ ಮೇಲಿನ ವ್ಯಾಮೋಹವು ಇನ್ನೆಂದೂ ಫಲಿಸಲಾರದು' ಎಂಬುವುದು ಆವನಿಗೆ ದೃಢವಾಯಿತು. ದೃಢಾಂಗನೂ, ಶಕ್ತಿವಂತನೂ ಆದ ಶತ್ರುವು ಆವನ ಬಂದೂಕವನ್ನು ವಶೀಕರಿಸಿದನು. ಈಗ ವಸಂತನಿಗೆ ತನ್ನ ನಿಜಸ್ಥಿತಿಯನ್ನು ನೋಡಿ, ನಾಚಿಕೆಯೂ, ಹೆದರಿಕೆಯೂ ಒತ್ತಡವೆಯೇ ಮೈದೋರಲಾರಂಭಿಸಿತ್ತು. ಕೂಡಲೇ ಆವನು ತನ್ನ ಕೈಗಳನ್ನು ಜೋಡಿಸಿ, 'ಕಮಲಾ! ನನ್ನ ಸಹಸ್ರ ತಪ್ಪುಗಳನ್ನು ಕ್ಷಮಿಸು. ನಿನ್ನನ್ನು ನನ್ನ ಮಗಳೆಂದೇ ಭಾವಿಸುವೆನು. ನನ್ನನ್ನು ಲೋಕದ ಅಪಹಾಸ್ಯಕ್ಕೂ, ಕಾನೂನಿನ ಶಿಕ್ಷೆಗೂ ಗುರಿಮಾಡುವೆಯೆಂದಾದರೆ ಇಗೋ ಈ ಕ್ಷಣ ನನ್ನನ್ನು ಕೊಲ್ಲುವೆವಳಾಗು. ಏನೋ ನಿನ್ನ ಮೇಲಿನ ವ್ಯಾಮೋಹದಿಂದ ನಾನಿಂತಹ ನೀಚ ಕಾರ್ಯಕ್ಕಿಳಿದೆನು. ದಯವಿಟ್ಟು ಕ್ಷಮಿಸು' ಎಂದು ಬೇಡಿಕೊಳ್ಳಲಾರಂಭಿಸಿದನು.

ಆಗಂತುಕನು ಮಾತಾಡಲಿಲ್ಲ.

ಕಮಲೆಯು ಹೇಳಿದಳು, 'ವಸಂತಾ, ನಾನಿಲ್ಲಿರುವೆನೆಂಬ ಸಂಗತ್ತಿ ನನಗೆ ಸರಿಯಾಗಿ ತಿಳಿಯದು, ಆದರೂ ನಿನ್ನನ್ನು ಕ್ಷಮಿಸುವೆನು. ನಮ್ಮಿಬ್ಬರನ್ನು ನೀನು ಮೊದಲು ಹೇಳಿದ ಹೊಟೇಲಿಗೆ ಕರೆದೊಯ್ದು ನನ್ನ ಪೆಟ್ಟಿಗೆಯನ್ನೂ, 'ವಿಲ್ಲನ್ನೂ' ನನ್ನ ವಶಕೊಪ್ಪಿಸಿ ನೀನೆಲ್ಲಿ ಬೇಕಾದರೂ ಹೋಗಬಹುದು' ಎಂದಳು.

[ಸಶೇಷ.

ಸೆಂಟ್ರಲ್ ಸಹಕಾರಿ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ. 3 ರಲ್ಲು ಬೆಳಿಗ್ಗೆ 11 ಗಂಟೆಯಿಂದ ಮು ಧ್ಯಾನ್ಹ 1 ಗಂಟೆ ವರೆಗೆ ರಾ. ಬ. ಪಟ್ಟ ಮಾಡ ದೇವಯ್ಯನವರ ಅಧ್ಯಕ್ಷತೆಯ ಲ್ಲೂ, ಮಧ್ಯಾನ್ಹದ ಮೇಲೆ ಶ್ರೀಮಾನ್ ಪಂದ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲೂ ಬ್ಯಾಂಕು ಆಫೀಸಿನಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ (1) ಪಿ. ಐ. ಬೆಳ್ಯಪ್ಪನವರು (ಅಧ್ಯಕ್ಷರು), (2) ಬಿ. ಎ. ಬೆಳ್ಯಪ್ಪನವರು, (3) ರಾ. ಬ. ಪಿ. ದೇವಯ್ಯನವರು, (4) ಯಂ. ಸಿ. ದೇವಯ್ಯನವರು, (5) ಕೆ. ಸಿ. ಕರುಂಬಯ್ಯನವರು, (6) ಐ ಪಿ. ಕಾರ್ಯಪ್ಪನವರು, (7) ಸಿ. ಎ. ಪುಂದಣ್ಣನವರು (ಟ್ರೆಜರರ್), (8) ಹೆಚ್. ಎಂ. ಪುಪ್ಪಣ್ಣನವರು, (9) ಎಂ. ಎಸ್. ಸೋಮಯ್ಯನವರು, (10) ಐ. ಸಿ. ಸುಬ್ಬಯ್ಯನವರು ಮತ್ತು (11) ಪಿ. ಜೆ. ಐಯ್ಯಪ್ಪನವರು (ಗೌ. ಕಾರ್ಯದರ್ಶಿ).

ಸಹಕಾರಿ ಸಂಘಗಳ ರಿಜಿಸ್ಟ್ರಾರವರೂ ಸಹ ಹಾಜರಿದ್ದರು.

ಈ ಕೆಳಗಿನ ಡೈರೆಕ್ಟರುಗಳು ಗೈರಾಜರಾಗಿದ್ದರು. ಮೆ. ಗಳಾದ (1) ಯಂ. ಯಂ. ಬೆಳ್ಯಪ್ಪನವರು, (2) ಸಿ. ಯಂ. ಭೀಮಯ್ಯನವರು, (3) ದಿ. ಬ. ಕೆ. ಜಂಗಪ್ಪನವರು ಮತ್ತು (4) ಪಿ. ಜಿ. ಮುದ್ದಮಯ್ಯನವರು.

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು. ಮೆ. ಬಿ. ಎ. ಬೆಳ್ಯಪ್ಪನವರು ಮಧ್ಯಾನ್ಹದ ವರೆಗೆ ಸದರಿ ಮೀಟಿಂಗಿಗ ಗೈರಾಜರಾದ್ದರಿಂದ ತನ್ನ ಒಪ್ಪಿಗೆಯನ್ನು ಕೊಡಲಿಲ್ಲ.

2. ಸುಪರ್‌ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

3. ನವೆಂಬರ್ ತಿಂಗಳ ಜಮಾ ಮತ್ತು ಖರ್ಚಿನ ಲೆಕ್ಕ ಓದಿ ಮುಂಜೂರು ಮಾಡಲಾಯಿತು.

ಹಿಂದಳ ಶಿಲ್ಕು	17,918-7-2
ಸದರಿ ತಿಂಗಳ ವಸೂಲಿ	19,223-15-5
ಜುಮ್ಲ	36,442-6-7
ಆ ತಿಂಗಳಲ್ಲಿ ಖರ್ಚು	18,270-14-6
ಬಾಕಿ ಶಿಲ್ಕು	18,171-8-1

4. ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ವಾಯಿದೆ ಮೀರಿದ ಸಾಲಗಳಿಗೆ ತಾ. 30-6-1939 ರ ವರೆಗೆ ವಾಯಿದೆ ಕೊಡಬೇಕೆಂದು ಕುಂಜಿಲಗೇರಿ ಸಂಘದವರು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

5. ಜೆಂಬೆಬೆಳಿಯೂರು ಗ್ರಾಮದ 3 ಸಂಘಗಳು, ಸಂಯೋಜಿತವಾಗಿರುವುದರಿಂದ ಬ್ಯಾಂಕಿಗೆ ಬರಬೇಕಾದ ಜುಮ್ಲ ಮೊಬಲಗಿಗೆ ಹೊಸದಾಗಿ 8 ಕಂತುಗಳನ್ನು ಕೊಟ್ಟು ಹೊಸ ಖರಾರು ಬರೆಸಿಕೊಳ್ಳಬೇಕೆಂದು ಜೆಂಬೆಬೆಳಿಯೂರು ಸೊಸೈಟಿಯವರು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

6. ಕಾನೂರು ಮತ್ತು ಕೋತೂರು ಗ್ರಾಮಸ್ಥರು ವನಗಳ ಪ್ರದರ್ಶನಕ್ಕಾಗಿ ಬ್ಯಾಂಕಿನಿಂದ 100 ರೂಪಾಯಿಗಳನ್ನು ಉಚಿತಾರ್ಥವಾಗಿ ಕೊಡಿಸಿಕೊಡಬೇಕೆಂದು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

7. ಬ್ಯಾಂಕಿನಲ್ಲಿ ಪ್ರತ್ಯೇಕ ಒಂದು ಶಾಖೆ ತೆರೆದು ದೀರ್ಘ ಕಂತಿನ ಸಾಲ ಕೊಡಲು ವಿಸ್ತಾರ ಮಾಡುವ ಉದ್ದಿಶ್ಯ ಸರಕಾರದವರ ಸಹಾಯ ಅಪೇಕ್ಷಿಸಿದ ಮೇರೆ ಆ ಉದ್ದಿಶ್ಯಕ್ಕಾಗಿ ಸರಕಾರದವರು ಬ್ಯಾಂಕಿಗೆ ಯಾವುದೊಂದು ಸಹಾಯ ಕೊಡಲಿಕ್ಕಾಗುವುದಿಲ್ಲವೆಂದು ಜೇಫ್ ಕಮಿಷನರವರ ಆರ್ಡರಿಗನುಸಾರವಾಗಿ ಕೊಡಗು ಕಮಿಷನರವರಿಂದ ಬಂದ ತಾರೀಕು 13-11-38 ರ ಪತ್ರವನ್ನು ಓದಿ ರಿಕಾರ್ಡು ಮಾಡಲಾಯಿತು.

8. ಎಡೆನಾಲ್ಕುನಾಡು ಯೂನಿಯನ್ ಪ್ರೆಸಿಡೆಂಟರು ಬ್ಯಾಂಕಿನಿಂದ ಹುತ್ರಿ ಸಾಲ ಮುಂಜೂರು ಮಾಡಲಿಕ್ಕಾಗಿ ಒಂದು ಸಬ್ ಕಮಿಟಿಯನ್ನು ನಿರ್ಮಾಡಿಸಬೇಕೆಂದು ಬರಕೊಂಡ ಪತ್ರವನ್ನು ಆಲೋಚಿಸಿ ಈ ಕೋರಿಕೆಯು ಅವಶ್ಯವಿಲ್ಲವೆಂದು ತೀರ್ಮಾನವಾಯಿತು.

9. ಬರುವ ಸಹಕಾರಿ ಸಮ್ಮೇಳನದ ಖರ್ಚು ಪೆಚ್ಚುವನ್ನೆಲ್ಲಾ ಸಂಘಗಳಲ್ಲಿ ತತ್ಕಾಲ ನಗದ್ದು ಹಣವಿಲ್ಲದ್ದರಿಂದ ಬ್ಯಾಂಕು ನಡಿಸಿಕೊಡಬೇಕೆಂದು ಎಡೆನಾಲ್ಕು ನಾಡು ಯೂನಿಯನ್ ಪ್ರೆಸಿಡೆಂಟರು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

10. ಬ್ಯಾಂಕಿನ ಉಪಯೋಗಕ್ಕಾಗಿ 15 ರೂಪಾಯಿಗಳಿಗೆ ಮೀರದಂತೆ ಒಂದು ಮೇಜ ಮಾಡಿಸಬಹುದೆಂದು ತೀರ್ಮಾನವಾಯಿತು.

11. ಒಬ್ಬ ಮಹನೀಯರು ತನ್ನ ಮತ್ತು ಒಬ್ಬ ಮಹನೀಯರ ಜಂಟಿ ಹೆಸರಿನಲ್ಲಿರುವ ಸೇವಿಂಗ್ಸ್ ಬ್ಯಾಂಕು ಮತ್ತು ಫಿಕ್ಸೆಡ್ ಡಿಪಾಜಿಟ್ಟು ಮೊಬಲಗುಗಳನ್ನು ತನ್ನ ಹೆಸರಿಗೇನೇ ವರ್ಗಾಯಿಸಿ ಕೊಡಬೇಕೆಂದು ಬರಕೊಂಡ ಪತ್ರವನ್ನು ಆಲೋಚಿಸಲಾಗಿ ಸದರಿ ಮಹನೀಯರ ಹೆಸರನ್ನು ಸೇರಿಸಿದ್ದು ತಪ್ಪಾಗಿರುವ ಕಾರಣ ಸೇವಿಂಗ್ಸ್ ಬ್ಯಾಂಕು ಲೆಕ್ಕ 57 ರಲ್ಲಿ ರೂ 10 ರ ಮೇರೆ ಸದರಿ ಮಹನೀಯರ ಹೆಸರನ್ನು ವಜಾ ಮಾಡುವಂತೆಯೂ, ಫಿಕ್ಸೆಡ್ ಡಿಪಾಜಿಟ್ಟು ಮೊಬಲಗನ್ನು ಮಹನೀಯರ ಹೆಸರಿಗೆ ವರ್ಗಾಯಿಸಬೇಕಾದರೆ ಮೇಲ್ಕಂಡ ಮಹನೀಯರ ಆಕ್ಷೇಪಣೆ ಏನಾದರೂ ಇದೆಯೋ ಎಂದು ಕೇಳುವಂತೆಯೂ ತೀರ್ಮಾನವಾಯಿತು.

12. ರಾ. ಸಾ. ನಡಿಕೇರಿಯಂಡ ಕಾಳಪ್ಪನವರ ಮತ್ತು ಚೊಟ್ಟೋಳಿಯಮ್ಮನ ಅಪ್ಪುಮಮ್ಮಯ್ಯನವರ ಹೆಸರಿನಲ್ಲಿ ಜಂಟಿ ಜಮಾಬಂದಿ ಇರುವ ಮಲೆದೇವರ ಡಿಪಾಜಿಟ್ಟು ಮೊಬಲಗನ್ನು ಸದರಿ ನಾಡಿನವರು ತೀರ್ಮಾನ ಮಾಡಿಕೊಳ್ಳುವ ವರೆಗೆ ಪೌತಿ ರಾ. ಸಾ. ನಡಿಕೇರಿಯಂಡ ಕಾಳಪ್ಪನವರ ಹೆಸರನ್ನು ವಜಾ ಮಾಡಿ ಮೆ. ನಡಿಕೇರಿಯಂಡ ಸಂಜಪ್ಪನವರ ಹೆಸರನ್ನು ಜಂಟಿಯಾಗಿ ಸೇರಿಸಕೂಡದು ಮೈರೆಯಾಗಿ ನಕೀಲರಾದ ಮೆ. ಎ. ಯಸ್. ರಾಮಯ್ಯ, ಬಿ. ಎ. ಎಲ್. ಎಲ್. ಬಿ. ಯವರು ಬರಕೊಂಡ ಪತ್ರವನ್ನು ಓದಲಾಗಿ, ಈ ವಿಷಯದಲ್ಲಿ ಬೇಕ್ಕಂಡ ರೀತಿ ಡೈರೆಕ್ಟರುಗಳು ತಾ. 29-10-38 ರಲ್ಲು ತೀರ್ಮಾನಿಸಿದ ಪ್ರಕಾರ ನಂಬರು 4737 ರ ನಖಲನ್ನು ಅವರಿಗೆ ಕಳುಹಿಸುವಂತೆ ತೀರ್ಮಾನವಾಯಿತು.

13. ಅಂಕನಳ್ಳಿ ಸೊಸೈಟಿಯವರು ತಮಗೆ ಈ ಮೊವಲೇ ಬ್ಯಾಂಕಿನಿಂದ ಮುಂಜೂರು ಮಾಡಿದ ಮೊಬಲಗಿನ ಪೈಕಿ ಪಾವತಿಗೆ ಬಾಕಿ ಇರುವ 200 ರೂಪಾಯಿಗೆ ಳನ್ನು ಕೊಡಿಸಿ ಕೊಡಬೇಕೆಂದು ಬರಕೊಂಡ ಅರ್ಜಿ ಮೇರೆ ಸದರಿ ಮೊಬಲಗನ್ನು ಕೊಡಬಹುದೆಂದು ತೀರ್ಮಾನವಾಯಿತು.

14. ಪಾಲೂರು ಸಂಘದವರು ತಮಗೆ ಕಳೆದ ಮೇ ತಿಂಗಳಲ್ಲಿಯೇ ಮುಂಜೂರು ಮಾಡಿದ ಸಾಲವನ್ನು ಈಗಲಾದರೂ ಕೊಡಿಸಿಕೊಡಬೇಕೆಂದು ಬರಕೊಂಡ ಅರ್ಜಿ ಮೇರೆ ಸದರಿ ಮುಂಜೂರು ಮಾಡಿದ ಸಾಲವನ್ನು ಕೊಡುವಂತೆ ತೀರ್ಮಾನವಾಯಿತು.

15. ಬೇಗೂರು ಸಂಘದವರು ತಮ್ಮ ಮೊವಲಿನ ಸಾಲದ ಅರ್ಜಿಯಲ್ಲಿ ನಮೂದಿಸಿದ ರೂ. 6,000 ಪೈಕಿ ರೂ. 3,000 ಮುಂಜೂರು ಮಾಡಬೇಕೆಂದು ಬರಕೊಂಡ ಅರ್ಜಿ ಪ್ರಕಾರ ರೂ. 1000 ಮಾತ್ರ ಬರುವ ಮೇ ತಿಂಗಳ ಆಖೈರೊಳಗೆ ಒಂದು ಗಂಟೆನಲ್ಲಿ ಮರುಪಾವತಿ ಮಾಡುವ ಶರತಿನಲ್ಲಿ ಮುಂಜೂರು ಮಾಡಲಾಯಿತು.

16. ಈ ಕೆಳಗಿನ ಸೊಸೈಟಿಗಳಿಗೆ ಆಯಾ ಪುಗಳ ಸಾಲದ ಅರ್ಜಿ ಪ್ರಕಾರ ಹುತ್ರಿ ಸಾಲ ಮುಂಜೂರು ಮಾಡಲಾಯಿತು:-1. ಐನುಮನ್ನ ಸೊಸೈಟಿಗೆ ರೂ. 150, 2. ಕುಪ್ಪಂಡ ಕುಟುಂಬ ಸೊಸೈಟಿಗೆ ರೂ. 150, 3. ರುಪ್ರಗುಪ್ಪೆ ಸೊಸೈಟಿಗೆ ರೂ. 200, 4. ಮೂಯಮುಡಿ ಸೊಸೈಟಿಗೆ ರೂ. 150 ಮತ್ತು 5. ಮುಗುಟಗೇರಿ ಸೊಸೈಟಿಗೆ ರೂ. 120.

17. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಶೂರೆನ್ಸ್ ಸೊಸೈಟಿಯ ಕೊಡಗು ಲೋಕಲ್ ಬೋರ್ಡಿನ ಕನ್ವೀನರರು ಸದರಿ ಸೊಸೈಟಿಗೆ ಅವರ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಸೇವಿಂಗ್ಸ್ ಬ್ಯಾಂಕು ಮೊಬಲಗನ್ನು ಪಾವತಿ ಮಾಡಬಹುದೋ ಎಂಬ ವಿಷಯ ಅವರು ಬರಕೊಂಡ ರಿಪೋರ್ಟನ್ನು ಓದಲಾಗಿ, ಈ ವಿಷಯವನ್ನು ಸಂಪೂರ್ಣವಾಗಿ ಬರುವ ಜನರಲ್ ಬಾಡಿಯವರ ಇರಾದೆಗೆ ಬಿಡುವಂತೆ ತೀರ್ಮಾನವಾಯಿತು.

18. ಕೊಡಗು ಲೋಕಲ್ ಬೋರ್ಡಿನ ಕನ್ವೀನರರ ಹೆಸರಿನಲ್ಲಿರುವ ಸೇವಿಂಗ್ಸ್ ಬ್ಯಾಂಕು ಡಿಪಾಜಿಟ್ ಮೊಬಲಗನ್ನು ಸೌತ್ ಇಂಡಿಯಾ ಇನ್ಶೂರೆನ್ಸ್ ಸೊಸೈಟಿಗೆ ಪಾವತಿ ಮಾಡಬೇಕೆಂದು ವಗೈರೆಯಾಗಿ ಸದರಿ ಸೊಸೈಟಿಯ ಪರವಾಗಿ ಮೆ. ಕು ಪೂರಸ್ವಾನುಯ್ಯ ಅಡ್ವೊಕೇಟ್ಸರು ಬರೆದ ಪತ್ರವನ್ನು ಆಲೋಚಿಸಿ ಈ ವಿಷಯವನ್ನು ಬ್ಯಾಂಕಿನ ಬರುವ ಜನರಲ್ ಬಾಡಿಯವರ ಆಲೋಚನೆಗೆ ಬಿಡಲಾಗಿದೆಯೆಂಬುದಾಗಿ ಸದರಿ ಅಡ್ವೊಕೇಟರಿಗೆ ತಿಳಿಸುವುದಾಗಿ ತೀರ್ಮಾನಿಸಲಾಯಿತು.

19. ಸೌತ್ ಇಂಡಿಯಾ ಕೋ-ಆಪರೇಟಿವ್ ಇನ್ಶೂರೆನ್ಸ್ ಸೊಸೈಟಿಯಲ್ಲಿ ಬ್ಯಾಂಕು ಪಡಕೊಂಡ 250 ರೂ. ಶೇರು ಮೊಬಲಗನ್ನು ಸದರಿ ಸೊಸೈಟಿಗೆ ಸಲ್ಲುವ ಕಾದ ಸೇವಿಂಗ್ಸ್ ಬ್ಯಾಂಕು ಮೊಬಲಗಿನ ಬಾಬ್ತು ವಜಾ ಹಿಡಿಯುತ್ತೇವೆಂದು ವಗೈರೆಯಾಗಿ ಅವರು ಬರೆದು ಕಳುಹಿಸಿದ ಪತ್ರವನ್ನು ಓದಲಾಯಿತು.

ಈ ವಿಷಯದಲ್ಲಿ ಸದರಿ ಶೇರು ಮೊಬಲಗನ್ನು ವಜಾ ಹಿಡಿಯಲು ಇನ್ಶೂರೆನ್ಸ್ ಸೊಸೈಟಿಗೆ ಯಾವ ಸ್ವತಂತ್ರವೂ ಇಲ್ಲವೆಂತಲೂ, ಆ ಮೊಬಲಗನ್ನು ಒಡನೆ ಪಾವತಿ ಮಾಡದಿದ್ದರೆ ಅದಕ್ಕೆ ತಕ್ಕ ಕ್ರಮ ಜರಗಿಸಲಾಗುವುದೆಂತಲೂ ಸದರಿ ಇನ್ಶೂರೆನ್ಸ್ ಸೊಸೈಟಿಯ ಸೆಕ್ರೆಟರಿಯವರಿಗೆ ತಿಳಿಸುವಂತೆ ತೀರ್ಮಾನವಾಯಿತು.

20. ಮೆ. ಯಂ. ಯಂ. ಬೆಳ್ಯಪ್ಪನವರು ತಾನು ಹೊಂದಿಕೊಂಡ ಬೋನಸ್ಸನ್ನು ಕಾರಣಾಂತರದಿಂದ ವಾಪಸು ಕೊಡಲಾಗುವುದಿಲ್ಲವೆಂದು ಬರೆದು ಕಳುಹಿಸಿದ್ದ ಪತ್ರವನ್ನು ಓದಲಾಯಿತು.

ಈ ವಿಷಯದಲ್ಲಿ ಅದಕ್ಕೆ ಸಮ್ಬಂಧಪಟ್ಟ ಪತ್ರವನ್ನೆಲ್ಲಾ ಮಹಾ ಸಭೆಯವರ ಮುಂದಿಡುವಂತೆ ತೀರ್ಮಾನವಾಯಿತು.

21. ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರೆದುಕೊಂಡ ಈ ಕೆಳಗಿನ ಮಹನೀಯರುಗಳನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು.

ಮೆ. ಗಳಾದ (1) ಮುಕ್ಕಾಟಿರ ಕರುಬಯ್ಯನವರು, (2) ಪಳಂಗಡ ಅಪ್ಪಯ್ಯನವರು, (3) ಫ್ರಾನ್ಸಿಸ್ ಡಿಸೋಸರು (4) ಮೂವೆರ ಚಿಣ್ಣಪ್ಪನವರು, (5) ಕೀತಿಯಂಡ ಕಾಳಪ್ಪನವರು, (6) ಮಂಡೇಪಂಡ ಸೋಮಯ್ಯನವರು, (7) ಮಂಡೇಪಂಡ ನಂಜಪ್ಪನವರು, (8) ಹೆಚ್. ಎಂ. ಪುಪ್ಪಣ್ಣನವರು, (9) ಒಕ್ಕಲಿಗರ ರಾಮಯ್ಯನವರು, (10) ಪುಟ್ಟಿಚಂಡ ಮೊಣ್ಣಪ್ಪನವರು, (11) ಮೊಣ್ಣಂಡ ಅಪ್ಪಯ್ಯನವರು, (12 ಜೋಡುಮಾಡ ಪೊನ್ನಪ್ಪನವರು, (13) ಮುಕ್ಕಾಟಿರ ಪೊನ್ನಪ್ಪನವರು ಮತ್ತು (14) ಪಟ್ಟಡ ಸೋಮಯ್ಯನವರು.

22. ಈ ವರ್ಷ ಮದ್ರಾಸ್ ತರಬೇತಿಗಾಗಿ ಕಳುಹಿಸಲ್ಪಡುವ ಉಮೇದ್ವಾರರುಗಳ ಹೆಸರುಗಳನ್ನು ಬರೆದು ಕಳುಹಿಸಬೇಕೆಂದು ರಿಜಿಸ್ಟ್ರಾರವರಿಂದ ಬಂದ ಪತ್ರವನ್ನು ಓದಲಾಯಿತು.

ಸುಪರ್‌ವೈಜರು ಮೆ. ಪಿ. ಎನ್. ಸೋಮಯ್ಯನವರನ್ನು ಬ್ಯಾಂಕಿನಿಂದ ತಿಂಗಳಿಗೆ 10 ರೂ. ಯಂತೆ ಸ್ಟೈಪೆಂಡ್ ಕೊಟ್ಟು ಕಳುಹಿಸುವಂತೆಯೂ ಉಳಿದ ಹಂಗಾಮಿ ಸುಪರ್‌ವೈಜರುಗಳ ಪೈಕಿ ತರಬೇತಿಗೆ ಹೋಗುವವರ ಹೆಸರುಗಳನ್ನು ಪ್ರೆಸಿಡೆಂಟರು ಮತ್ತು ಗೌರವ ಕಾರ್ಯದರ್ಶಿ

(7 ನೇ ಪುಟಕ್ಕೆ ಸಾಗಿದೆ.)

ಕೊ ಡ ಗು

ಡಿಸೆಂಬರ್ ತಾರೀಕು ೨೩ನೇ ಶುಕ್ರವಾರ ೧೯೩೮.

ಕಾಂಗ್ರೆಸ್ ಸಂಸ್ಥೆಯ ಶುದ್ಧೀಕರಣ.

ಕಾಂಗ್ರೆಸ್ ಸಂಸ್ಥೆಯು ಕೆಲವು ಸಮಯದ ಹಿಂದೆ ತ್ಯಾಗದ ಬೆಂಕಿಯಲ್ಲಿ ಬೇಯುತ್ತಿದ್ದಾಗ್ಯೆ ನಿಜವಾದ ದೇಶ ಸೇವಕರು ಸ್ವಾರ್ಥತೆಯನ್ನು ಬಿಟ್ಟು ಅದರಲ್ಲಿ ಸೇರಿ ಅದರ ಕಾರ್ಯಕಲಾಪಗಳಲ್ಲಿ ಭಾಗ ವಹಿಸುತ್ತಿದ್ದರು. ಅವರ ಕಷ್ಟ ಸಹಿಷ್ಣುತೆಯ ಫಲಿತಾಂಶವಾಗಿ ಕಾಂಗ್ರೆಸು ಸಂಸ್ಥೆಯು ದೇಶದ ದೊಡ್ಡ ಬಹುಮತದ ಜನರ ವಿಶ್ವಾಸವನ್ನು ಗಳಿಸಿತು. ಅದರ ಪರಿಣಾಮವಾಗಿ ಕಳೆದ ಸಾರಿ ನಡೆದ ಚುನಾವಣೆಗಳಲ್ಲಿ ಹೆಚ್ಚಿನ ಪ್ರಾಂತ್ಯಗಳಲ್ಲಿ ಕಾಂಗ್ರೆಸು ಪಕ್ಷದವರು ಜಯಶೀಲರಾದರು. ಈ ದೆಸೆಯಿಂದ ಕಾಂಗ್ರೆಸ್ ಪಾರ್ಟಿಯವರು ಪ್ರಾಂತೀಕ ನ್ಯಾಯವಿಧಾಯಕ ಸಭೆಗಳಲ್ಲಿಯೂ, ಜಿಲ್ಲಾಬೋರ್ಡು, ಮುನ್ಸಿಪಾಲಿಟಿ ಮೊದಲಾದ ಸ್ಥಳೀಯ ಸ್ವರಾಜ್ಯ ಸಂಸ್ಥೆಗಳಲ್ಲಿಯೂ ಬಹುಮತ ಪಡೆದು ಅಧಿಕಾರಕ್ಕೆ ಬಂದರು. ಕಾಂಗ್ರೆಸ್ಸಿನ ಜಯವನ್ನು ನೋಡಿಯೂ, ಅಧಿಕಾರ, ಉದ್ಯೋಗ ಮತ್ತು ಉತ್ತಮ ಪದವಿಗಳನ್ನು ಪಡೆಯುವ ಆಶೆಯಿಂದಲೂ ಇತ್ತೀಚಿಗೆ ಹಲವರು ಕಾಂಗ್ರೆಸ್ಸನ್ನು ಸೇರಲಾರಂಭಿಸಿದರು. ಯಾರು ಸ್ವಾರ್ಥ ಉದ್ದೇಶದಿಂದ ಕಾಂಗ್ರೆಸ್ಸಿನೊಳಗುನ್ಗಲು ಪ್ರಯತ್ನಿಸಿದರೋ ಅಂಥವರು ತಮ್ಮ ಆಶೆಯನ್ನು ನೆರವೇರಿಸಿಕೊಳ್ಳಲು ಅಯೋಗ್ಯ ರೀತಿಗಳನ್ನು ಕೈಕೊಳ್ಳಹತ್ತಿದರು. ಕಾಂಗ್ರೆಸ್ ಸಮಿತಿಗಳಲ್ಲಿ ಅಧಿಕಾರಕ್ಕೆ ಬರಲು ಐಶ್ವರ್ಯವಂತರಾದವರು ತಮ್ಮ ಜೇಬಿನಿಂದ ಚಂದಾ ಕೊಟ್ಟು ತಮ್ಮ ಆಶ್ರಿತರನೇಕರನ್ನು ಕಾಂಗ್ರೆಸ್ ಮೆಂಬರುಗಳಾಗಿ ಸೇರಿಸಿದರು. ತಮ್ಮ ಪಕ್ಷದವರಿಗೇ ಮೆಂಬರುಗಳನ್ನು ಸೇರಿಸುವ ಅನುಕೂಲ ಮಾಡಿಕೊಟ್ಟರು. ಹೀಗಾಗಿ ತ್ಯಾಗದ ಸಂಸ್ಥೆಯು ಸ್ವಾರ್ಥತೆಯಿಂದ ತುಂಬಲಾರಂಭಿಸಿತು. ಈ ರೀತಿಯಿಂದ ಕಾಂಗ್ರೆಸು ಸದಸ್ಯರುಗಳ ಸಂಖ್ಯೆಯೇನೋ ಹೆಚ್ಚುತ್ತಾ ಬಂತು. ಆದರೆ ಹಾಗೆ ಸೇರಿಸಲ್ಪಟ್ಟವರೆಲ್ಲರೂ ಮನಪೂರ್ವಕವಾಗಿ ಕಾಂಗ್ರೆಸ್ ತತ್ವಗಳನ್ನು ನಂಬಿನವರಾಗಿರಲಿಲ್ಲ. ತೋರಿಕೆಗೆ ಮಾತ್ರ ಕಾಂಗ್ರೆಸ್ಸಿನವರೆಂದು ಕೊಂಡು ತಮ್ಮ ತಮ್ಮ ಸ್ವಾರ್ಥದ ಗುರಿಗಳನ್ನು ಸಾಧಿಸಿಕೊಳ್ಳಲು ಯತ್ನಿಸುವವರಾದರು. ಆದುದರಿಂದ ತ್ಯಾಗಿಗಳೂ, ನಿಜ ದೇಶ ಸೇವಕರೂ ಆದ ಕಾಂಗ್ರೆಸ್ ಕೆಲಸಗಾರರು ಮೂಲೆಗೊತ್ತಲ್ಪಟ್ಟು, ತೋರಿಕೆಯ ಕೆಲಸಗಾರರು ಅಧಿಕ್ಕಾರಕ್ಕೇರಲಾರಂಭಿಸಿದರು. ಈ ತರದ ಪುಕಾರುಗಳನೇಕ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೂ, ಮಹಾತ್ಮಗಾಂಧಿಯವರಿಗೂ ತಲಪಿದವು. ಇದರಿಂದ ಕಾಂಗ್ರೆಸ್ಸಿನ ಶುದ್ಧತೆಗೂ, ಶಕ್ತಿಗೂ ಮತ್ತು ಕೀರ್ತಿಗೂ ಕುಂದಕ ಉಂಟಾಗುವದೆಂದು ಅವರಿಗೆ ತೋರಿತು. ಆದಕಾರಣ ಮಹಾತ್ಮರು ಈಗ ಕೆಲವು ತಿಂಗಳುಗಳಿಂದ ಕಾಂಗ್ರೆಸ್ಸನ್ನು ಶುದ್ಧೀಕರಿಸುವುದನ್ನು ಕುರಿತು ತಮ್ಮ 'ಹರಿಜನ' ಪತ್ರಿಕೆಯಲ್ಲಿ ಬರೆಯುತ್ತಾ ಬರುತ್ತಿರುವರು.

ಈ ಮಹತ್ವದ ವಿಷಯವು ಕಳೆದ ವಾರ ವಾರ್ಧಾದಲ್ಲಿ ನಡೆದ ಕಾಂಗ್ರೆಸು ವರ್ಕಿಂಗ್ ಕಮಿಟಿಯ ವಿೂಟಿಂಗಿನಲ್ಲಿ ಚರ್ಚಿಸಲ್ಪಟ್ಟಿತು. ಇದನ್ನು ಕುರಿತು ಅಲ್ಲಿ ಮಂಜೂರಾದ ನಿರ್ಣಯವನ್ನು ಇನ್ನೊಂದು ಕಡೆ ಕೊಡಲಾಗಿದೆ. ಕಾಂಗ್ರೆಸು ಮೆಂಬರುಗಳ ರಿಜಿಸ್ಟರುಗಳನ್ನು ತಿದ್ದಿಸಿ, ಅನರ್ಹರಾದವರ ಹೆಸರುಗಳನ್ನು ವಜಮಾಡಬೇಕೆಂದೂ, ಪ್ರಾಥಮಿಕ ಸಂಸ್ಥೆಗಳ ಆಫೀಸಿನಲ್ಲಿ ಸರ್ಟಿಫಿಕೇಟು ಕಾರ್ಡನ್ನು ಪಡೆದವರು ಮಾತ್ರ ಓಟಿನ ಹಕ್ಕುಳ್ಳವರಾಗಬೇಕೆಂದೂ, ಕಾಂಗ್ರೆಸು ಸಂಸ್ಥೆಯ ಯಾವ ಅಧಿಕಾರಸ್ಥಾನಕ್ಕೇ ಬರಬೇಕಾದರೂ ಆತನು ಸದಸ್ಯ ಖಾದಿ ಧರಿಸುವವನಾಗಿರಬೇಕೆಂಬ ಶರತನ್ನು ಚೆನ್ನಾಗಿ ಪಾಲಿಸಬೇಕೆಂದೂ, ಕಾಂಗ್ರೆಸು ಮಹಾ ಸಭೆಗೆ ಪ್ರತಿನಿಧಿಯಾಗಿ ಆರಿಸಲ್ಪಡತಕ್ಕವನು ಮೂರು ವರ್ಷಗಳಿಂದ ಕಾಂಗ್ರೆಸು ಸದಸ್ಯನಾಗಿರಬೇಕಲ್ಲದೆ ಸ್ವತಃ ಐದು ಸಾವಿರ ಗಜ ನೂಲು ಪೂಡಿರಬೇಕೆಂದೂ ಮಾಡಿವ ನಿರ್ಣಯವು ನ್ಯಾಯವಾದದ್ದೆಂಬುದರಲ್ಲಿ ಸಂಶಯವಿಲ್ಲ. ಈ ಶರತುಗಳು ತಕ್ಕ ಕಾಲನಲ್ಲಿ ಸೂಚಿಸಲ್ಪಟ್ಟಿವೆ. ಇವುಗಳನ್ನು ಕೂಡಲೆ ಜಾರಿಗೆ ತಾರದೆ ಹೋದ ಪಕ್ಷದಲ್ಲಿ ಕಾಂಗ್ರೆಸ್ಸಿನ ಶುದ್ಧತೆಯು ಕೆಟ್ಟು ಹೋಗಿ, ಅದರ ಶಕ್ತಿಯು ಕಡಿಮೆಯಾಗದಿರದು. ಈ ಕೆಲಸವನ್ನು ಕೂಡಲೆ ನಡಿಸುವಂತೆ ಪ್ರಾಂತೀಕ ಕಾಂಗ್ರೆಸು ಕಮಿಟಿಗಳಿಗೆ ಬಿಡಲಾಗಿದೆ. ಆದರೆ ಈ ಕಾರ್ಯದಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿಗಳಿಗೂ ತಕ್ಕಷ್ಟು ಜವಾಬ್ದಾರಿಯನ್ನು ವಹಿಸಿದ್ದರೆ ಕೆಲಸವು ಸುಲಭವಾಗಿಯೂ, ಸರಾಗವಾಗಿಯೂ, ಶೀಘ್ರವಾಗಿಯೂ ನಡೆಯಲು ಅನುಕೂಲವಾಗುತ್ತಿತ್ತು. ಹೇಗೂ ಕಾಂಗ್ರೆಸ್ಸಿನೊಳಗಿನ ಕಾರುಭಾರುಗಳಲ್ಲಿ ಉಂಟಾಗಿರುವ ಅಶುದ್ಧತೆಯನ್ನು ಹೋಗಲಾಡಿಸುವುದು ಅತ್ಯಗತ್ಯವಾಗಿದೆ. ನಿಜ ದೇಶ ಭಕ್ತರೆಲ್ಲರೂ ಈ ಕಾರ್ಯದಲ್ಲಿ ನೆರವಾಗಿ, ಕಾಂಗ್ರೆಸು ಸಂಸ್ಥೆಯು ದೇಶದಲ್ಲಿ ತನ್ನ ತೇಜಸ್ಸನ್ನು ಹೆಚ್ಚೆಚ್ಚಾಗಿ ಬೀರುವಂತೆ ಸಹಕರಿಸುವರಾಗಿ ಆಶಿಸುತ್ತೇವೆ.

ಸಾರ್ವಜನಿಕ ಸಭೆಗಳು.

ವೀರಾಜಪೇಟೆ.

ಕೊಡಗು ಜಮಿನ್ದಾರರ ಸಂಘದ ಆಶ್ರಯದಲ್ಲಿ ಈ ತಾ. 21 ರಲ್ಲಿ ವೀರಾಜಪೇಟೆ ರೀಡಿಂಗ್ ರೂಮು ಎದುರುಗಡೆ ಮೆ. ಕೇತಿಯಂಡ ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಸೇರಿತು. 300 ಕ್ಕಿಂತ ಹೆಚ್ಚಾಗಿ ಜನರು ನೆರೆದಿದ್ದರು. ಮೆ. ಪಿ. ಐ. ಬೆಳ್ಯಪ್ಪನವರು ವಿೂಟಿಂಗಿನ ಉದ್ದಿಶ್ಯವನ್ನು ವಿವರಿಸಿ ಹೇಳಿದ ನಂತರ, ಈ ಕೆಳಗಿನ ತರಾವುಗಳು ಸರ್ವಸಮ್ಮತದಿಂದ ಪಾಸಾದವು.

(1) 'ರೆವಿನ್ಯೂ ಮ್ಯಾನ್ಯುವಲ್' ತಿದ್ದುಪಡಿಯ ವಿಷಯವಾಗಿ ಕೊಡಗು ಗಜೆಟಿನಲ್ಲಿ ಪ್ರಕಟ ಮಾಡಿದ ಕರಡು ತಿದ್ದುಪಡಿಯು ರೈತರ ಹಿತಕ್ಕೆ ವಿರುದ್ಧವಾದ್ದರಿಂದ ಅವುಗಳನ್ನು ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ' ಸೂಚಕರು–ಮೆ. ಕೇತಿಯಂಡ ಕುಟ್ಟಪ್ಪನವರು. ಅನುಮೋದಕರು–ಮೆ. ಚಿಂಬಾಂಡ ಮೂದಪ್ಪನವರು. ತರಾವು ಸರ್ವಾನುಮತದಿಂದ ಮಂಜೂರಾಯಿತು.

(2) 'ನೇಲ್ಕಂಡ ರೆವಿನ್ಯೂ ಮ್ಯಾನ್ಯುವಲ್ ತಿದ್ದುಪಡಿಯನ್ನು ಬರೇ ಗಜೆಟಿನಲ್ಲಿ ಇಂಗ್ಲಿಷಿನಲ್ಲಿ ಮಾತ್ರ ಪ್ರಕಟಿಸಿ ರೈತರ ಅಭಿಪ್ರಾಯಕ್ಕೆ ಈ ಡಿಸೆಂಬರ್ ಆಖೈರು ವರೆಗೆ ಮಾತ್ರ ಅವಧಿಕೊಟ್ಟದ್ದು ಸಾಲದ ಕಾರಣ ಸದರಿ ಕರಡು ತಿದ್ದುಪಡಿಗಳನ್ನು ಕನ್ನಡದಲ್ಲಿ ಅಚ್ಚು ಹಾಕಿಸಿ ಹೆಸ್ತ ಪತ್ರಗಳ ಮೂಲಕವೂ, ಸ್ಥಳೀಯ ವರ್ತಮಾನ ಪತ್ರಗಳ ಮೂಲಕವೂ ದೇಶದ ಜನರಿಗೆ ಹಂಚಿ, ಹಾಗೆ ಪ್ರಕಟಿಸಿದ ತಾರೀಕು ಲಾಗಾಯಿತು 3 ತಿಂಗಳ ವರೆಗೆ ರೈತರಿಗೆ ತಮ್ಮ ಅಭಿಪ್ರಾಯವನ್ನು ಕೊಡಲು ಸಮಯ ಕೊಡಬೇಕಾಗಿ ಈ ಸಭೆಯು ಸರಕಾರವನ್ನು ಕೇಳಿಕೊಳ್ಳುತ್ತದೆ.' ಸೂಚಕರು–ಮೆ. ಪುಲಿಯಂಡ ಕುಶಾಲಪ್ಪನವರು. ಅನುಮೋದಕರು–ಕೇತಿಯಂಡ ಕರುಂಬಯ್ಯನವರು. ವಿರೋಧವಿಲ್ಲದೆ ಪಾಸಾಯಿತು.

3. 'ದೇಶದವರು ಕೊಡುವ ಅಲೋಚನೆ ಕುತ್ತು ಆಕ್ಷೇಪಣೆಗಳನ್ನು ಪರ್ಯಾಲೋಚಿಸಿ ಆಖೈರು ತಿದ್ದುಪಡಿಗಳನ್ನು ನಿಶ್ಚಯಿಸಲು ಜಮಿನ್ದಾರರ ಸಂಘದವರು ಆರಿಸಿ ಕಳುಹಿಸಿದ ಮೆಂಬರುಗಳ ಬಹುಮತವಿರುವ ಒಂದು ಕಮಿಟಿಯನ್ನು ನೇರ್ಪಡಿಸಿ, ಅವರು ಶಿಫಾರಸ್ಸು ಮಾಡುವ ತಿದ್ದುಪಡಿಗಳನ್ನೇ ಜಾರಿಗೆ ತರಬೇಕೆಂದು ಈ ಸಭೆಯು ಸರ್ಕಾರವನ್ನು ಕೇಳಿಕೊಳ್ಳುತ್ತದೆ.' ಸೂಚಕರು–ಮೆ. ಬಲ್ಲಚಂಡ ಪೊನ್ನಪ್ಪನವರು. ಅನುಮೋದಕರು–ಮೆ. ಕುಟ್ಟಂಡ ದೇವಯ್ಯನವರು. ಸರ್ವಸಮ್ಮತದಿಂದ ಮಂಜೂರಾಯಿತು.

4. 'ಈಗಿನ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕೊಡಗಿನ ಶಾಲೆಗಳಲ್ಲಿ ಸ್ಕೂಲ್ ಫೀಜು ಮತ್ತು ದಾಕ್ಲಾತಿ ಫೀಜನ್ನು ಕಡಿಮೆ ಮಾಡುವುದರ ಬದಲು ಏರಿಸಿದ್ದು ತುಂಬಾ ಅತೃಪ್ತಿ ಮತ್ತು ಅಸಮಾಧಾನಕರ. ಆದುದರಿಂದ ಹೆಚ್ಚಿಸಿದ ದರವನ್ನು ಜಾರಿಗೆ ತರಬಾರದಾಗಿ ಸರಕಾರದವರನ್ನು ಈ ಸಭೆಯು ಕೇಳಿಕೊಳುತ್ತದೆ.' ಸೂಚಕರು–ಮೆ. ಜೆಕ್ಕೆರ ಅಪ್ಪಯ್ಯನವರು, ಅನುಮೋದಕರು–ಮೆ. ಪುಲಿಯಂಡ ಸೋಮಯ್ಯನವರು. ಒಮ್ಮತದಿಂದ ಪಾಸಾಯಿತು.

5. 'ಸಿಬ್ಬಂದಿ ಖೋತೆಯ ನೆಪದಿಂದ ಹಾಲಿ ಇರುವ ನಾಡು ಖಜೇರಿಗಳಲ್ಲಿ ಎರಡನ್ನು ತೆಗೆಯಲು ನಿಶ್ಚಯಿಸಿರುವದನ್ನು ಈ ಸಭೆಯು ಖಂಡಿಸುತ್ತದೆ ಮತ್ತು ರೈತರ ಹಿತದೃಷ್ಟಿಯಿಂದ ನಾಡು ಖಜೇರಿಗಳ್ಯಾವದನ್ನೂ ತೆಗೆಯಬಾರದಾಗಿ ಈ ಸಭೆಯು ಚೀಫ್ ಕಮಿಷನರನ್ನು ಕೇಳಿಕೊಳ್ಳುತ್ತದೆ.' ಸೂಚಕರು–ಮೆ. ಪಾಲೇಕಂಡ ಪೂವಯ್ಯನವರು. ಅನುಮೋದಕರು–ಮೆ. ಪುಲಿಯಂಡ ಪೂವಯ್ಯನವರು. ವಿರೋಧವಿಲ್ಲದೆ ಮಂಜೂರಾಯಿತು.

6. 'ವೀರಾಜಪೇಟೆ ಹುಡುಗಿಯರ ಶಾಲೆಯನ್ನು ಮುಚ್ಚಲು ತೀರ್ಮಾನಿಸಿದ್ದು ಖಂಡನೀಯವಾಗಿದೆ. ಹಾಗೆ ಮುಚ್ಚಕೂಡದೆಂದು ಈ ಸಭೆಯು ಸರ್ಕಾರವನ್ನು ಕೇಳಿಕೊಳ್ಳುತ್ತದೆ.' ಸೂಚಕರು:–ಮೆ. ಕೊಂಗಡ ಕರುಂಬಯ್ಯನವರು. ಅನುಮೋದಕರು:–ಮೆ. ಪಳೆಯಂಡ ಚಂಗಪ್ಪನವರು. ತರಾವು ಮಂಜೂರಾಯಿತು.

7. 'ಕೊಡಗನ್ನು ದೊಡ್ಡ ಪ್ರಾಂತ್ಯಕ್ಕೆ ಸೇರಿಸಬೇಕೆಂದು ಕೆಲವು ಮಹನೀಯರು ದೇಶದವರ ಅಭಿಪ್ರಾಯವನ್ನು ಕೇಳದೇನೇ ವೈಸರಾಯರಿಗೆ ಒಂದು ಮೆಮೋರಿಯಲ್ ಕಳುಹಿಸಿರುವುದನ್ನು ಈ ಸಭೆಯು ಖಂಡಿಸುತ್ತದೆ. ಆ ಮೆಮೋರಿಯಲ್‌ನಲ್ಲಿ ಸೂಚಿಸಿರುವ ಅಭಿಪ್ರಾಯವು ದೇಶದವರ ಅಭಿಪ್ರಾಯವಲ್ಲವೆಂದು ಈ ಸಭೆಯು ದೃಢೀಕರಿಸುತ್ತದೆ.' ಸೂಚಕರು:–ಮೆ. ಮೂಕೆಟ್ಟಿರ ಮುತ್ತಣ್ಣನವರು. ಅನುಮೋದಕರು ಮೆ. ಕೇತಿಯಂಡ ಕುಶಾಲಪ್ಪನವರು. ತರಾವು ಪಾಸಾಯಿತು.

ಬಾಳೆಲೆ.

ಈ ತಾ. 12ರಲ್ಲಿ ಮೆ. ಕಾರ್ಯಂಗಳ ನಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಈ ಕೆಳಗಿನ ತರಾವುಗಳು ಪಾಸಾದವು.

1. 'ಕೊಡಗು ಗಜೆಟಿನಲ್ಲಿ ಬರೇ ಇಂಗ್ಲಿಷಿನಲ್ಲಿ ಪ್ರಕಟಿಸಿರುವ ರೆವಿನ್ಯೂ ಮ್ಯಾನ್ಯುಯಲ್‌ನ ತಿದ್ದುಪಡಿಯಕರಡು ನಿಬಂಧನೆಗಳು ವ್ಯವಸಾಯಗಾರರಿಗೆ ತುಂಬಾ ಅಹಿತವಾದುದರಿಂದ ಅವುಗಳನ್ನು ಈ ಸಭೆಯು ಸಂಪೂರ್ಣ ವಿರೋಧಿಸುತ್ತದೆ ಮತ್ತು ಅವುಗಳನ್ನು ಜಾರಿಗೆ ತರಬಾರದೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳುತ್ತದೆ.' ತರಾವು ವಿರೋಧವಿಲ್ಲದೆ ಪಾಸಾಯಿತು.

2. 'ಸದರಿ ತಿದ್ದುಪಡಿಗಳನ್ನು ಕನ್ನಡದಲ್ಲಿ ಪ್ರಕಟಿಸಿ, ಕಮ್ಮಿ ಪಕ್ಷ ಆರು ತಿಂಗಳ ಸಮಯವಾದರೂ ಕೊಟ್ಟು, ಅವುಗಳನ್ನು ಸರಿಯಾಗಿ ತಿದ್ದುಪಡಿ ಮಾಡಲು ಉದ್ಯೋಗಸ್ಥರಲ್ಲದ ಬಹುಮತವಿರುವ ಕಮಿಟಿಯೊಂದನ್ನು ನೇಮಿಸಕ್ಕದ್ದು.' ಒ

ತದಿಂದ ಪಾಸಾಯಿತು.

3. 'ಕೊಡಗಿನ ಶಾಲೆಗಳಲ್ಲಿ ಫೀಸ ಏರಿಸಿದ್ದನ್ನು ಈ ಸಭೆಯು ನಿರೋಧಿಸುತ್ತದೆ ಮತ್ತು ಅದನ್ನು ಜಾರಿಗೆ ತರಬಾರದೆಂದು ಸರ್ಕಾರರವನ್ನು ಕೇಳಿಕೊಳ್ಳುತದೆ.' ವಿರೋಧವಿಲ್ಲದೆ ಪಾಸಾಯಿತು.

4. 'ಎರಡು ನಾಡು ಕಚೇರಿಗಳನ್ನು ಮಾಡಲು ತೀರ್ಮಾನಿಸಿದನ್ನು ಈ ಸಭೆಯು ಖಂಡಿಸುತ್ತದೆ ಮತ್ತು ಹಾಗೆ ಮಾಡ ಕೂಡದೆಂದು ಚೀಫ್ ಕಮಿಷನರನ್ನು ಕೇಳಿಕೊಳ್ಳುತ್ತದೆ.' ವಿರೋಧವಿದೆ ಪಾಸಾಯಿತು.

5. 'ಕೊಡಗನ್ನು ಮೊಡ್ಡ ಪ್ರಾಂತ್ಯಕ್ಕೆ ಸೇರಿಸಬೇಕೆಂದು ದೇಶವರ ಅಭಿಪ್ರಾಯ ತಿಳಿದು ವೈಸರಾಯರಿಗೆ ಕೆಲವರು ಮೆಮೋರಿಯಲ್ (ಅರ್ಜಿ) ಕಳುಹಿಸಿದನ್ನು ಈ ಸಭೆಯು ಖಂಡಿಸುತ್ತದೆ ಮತ್ತು ಅಪವಾದವಲ್ಲಿ ಸೂಚಿಸಿರುವುದು ದೇಶವರ ಅಭಿಪ್ರಾಯವಲ್ಲವೆಂದು ಈ ಸಭೆಯು ವ್ಯಕ್ತೀಕರಿಸುತ್ತದೆ.' ಸೂಚಕರು:-ಕೆ. ಸಿ. ಕರುಂಬಯ್ಯನವರು. ಇದಕ್ಕೆ ಪರವಾಗಿ ಮೆ. ಗಳಾದ ಜಪ್ಪಿಡ ಮೂವಪ್ಪ, ಪಿ. ಐ. ಬೆಳ್ಯಪ್ಪ, ಮಚ್ಚಮಾಡ ತಮ್ಮಯ್ಯ ಮತ್ತು ಮೂಪಂಗಡ ನಂಜಪ್ಪನವರೂ, ಈಗ ಈ ವಿಷಯವನ್ನು ತೀರ್ಮಾನಿಸುವ ಅಗತ್ಯವಿಲ್ಲವೆಂದು ಮೆ. ಗಳಾದ ಸಿ. ಯಂ ಪೂಣಚ್ಚನವರು ಮತ್ತು ಅಪೇಂಗಳ ಪೂವಯ್ಯನವರೂ ಮಾತಾಡಿದರು. ಠರಾವು ವಿರೋಧವಿಲ್ಲದೆ ಪಾಸಾಯಿತು. ಅಧ್ಯಕ್ಷರ ಆಖೈರು ಭಾಷಣದಿಂದ ಸಭೆಯು ಮುಕ್ತಾಯವಾಯಿತು.

ಅಮ್ಮತ್ತಿ.

ತಾರೀಕು 13-12-38ರಲ್ಲಿ ಅಮ್ಮತ್ತಿಯಲ್ಲಿ ಸೇರಿದ ಸಾರ್ವಜನಿಕ ಮಿಟಿಂಗಿಗೆ ಶ್ರೀ ಕುಟ್ಟಂಡ ಮುತ್ತಣ್ಣನವರು ಅಧ್ಯಕ್ಷರಾಗಿದ್ದರು.

ಮೆ. ಗಳಾದ ಪಿ. ಐ. ಬೆಳ್ಯಪ್ಪನವರು ಮತ್ತು ನೆಲ್ಲಮಕ್ಕಡ ದೇವಯ್ಯನವರು ಮಿಟಿಂಗಿನ ಉದ್ದಿಶ್ಯವನ್ನು ವಿವರಿಸಿದನಂತರ ಒಮ್ಮತದಿಂದ ಮೇಲ್ಕಂಡ ನಿರ್ಣಯಗಳೇ ಇಲ್ಲಿಯೂ ಪಾಸಾದವು.

ಫ್ರೇಜರ್‌ಪೇಟೆ ಮಿಟಿಂಗು

ಫ್ರೇಜರ್‌ಪೇಟೆ ಹೋಬಳಿಯವರ ಒಂದು ಸಾರ್ವಜನಿಕ ಮಿಟಿಂಗು ಮು. ರಾ. ಶ್ರೀ. ಮನೆಯಪಂಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಂತೆಮೊಳದ ಬಳಿಯಲ್ಲಿ ತಾ. 20ರಲ್ಲಿ ಜರುಗಿತು. ಸುಮಾರು 200 ಜನರು ನೆರೆದಿದ್ದರು. ಮು. ರಾ. ಶ್ರೀ. ಕೆ. ಮಲ್ಲಪ್ಪನವರು ಮಿಟಿಂಗಿನ ಉದ್ದಿಶ್ಯವನ್ನು ವಿವರಿಸಿದ ಮೇಲೆ, ಈಗ ತಾನೇ ಗಜೆಟಿನಲ್ಲಿ ಪ್ರಕಟಣೆಯಾದ ರೆವಿನ್ಯೂ ರೂಲ್ಸ್ ಕರಡು ನಿಬಂಧನೆಯನ್ನು ಖಂಡಿಸಿ ದೀರ್ಘವಾಗಿ ಮಾತಾಡಿದರು. ಮೆ. ಸುಬ್ಬ ಅವಧಾನಿಗಳು ಠರಾವನ್ನು ಅನುಮೋದಿಸಿ ದೀರ್ಘವಾಗಿ ಮಾತಾಡಿದರು. ನಂತರ ಸಭೆಯವರು ಒಮ್ಮತದಿಂದ ಮು. ರಾ. ಶ್ರೀ. ಮಲ್ಲಪ್ಪನವರು ತಂದ ಠರಾವನ್ನು ಪಾಸು ಮಾಡ್ದಿದರು.

ಮು. ರಾ. ಶ್ರೀ. ದೇವರಾಜು ಗೌಡರು ಈಗ ತಾನೇ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ತೀರ್ಮಾನವಾದಂಥಾ ಠರಾವನ್ನು ಎಂದರೆ ಉಪಾಧ್ಯಾಯರುಗಳನ್ನು ಎಂಟು ವರ್ಷ ಕ್ಕೊಮ್ಮೆ ವೆರ್ಗಾವರ್ಗಿ ಮಾಡಬೇಕೆಂದು ತೀರ್ಮಾನವಾದುದನ್ನು ಖಂಡಿಸಿ ಠರಾವನ್ನು ರದ್ದು ಮಾಡಬೇಕೆಂದು ಮಾತಾಡಿದನ್ನು ಸಭೆಯವರ ಮುಂದೆ ಇಟ್ಟರು.

ಮೆ. ಸುಬ್ಬ ಅವಧಾನಿಗಳು ಅದನ್ನು ಅನುಮೋದಿಸಿ ಡಿ. ಬೋರ್ಡಿನ ಮೇಲ್ಕಂಡ ಠರಾವು ಉಪಾಧ್ಯಾಯರ ಹಿತಕ್ಕೆ ಹೆಚ್ಚು ಕೊಂಬರೆ ತರುತ್ತದೆಂದು ಹೇಳಿ, ಇಂಥಾ ತೀರ್ಮಾನವು ಯಾವ ಅಪರಾಧವೂ ಇಲ್ಲದೆ ತರುವುದು ಹಾನಿಕಾರಕವೆಂದೂ, ದೀರ್ಘವಾಗಿ ಮಾತಾಡಿದರು. ಮಹಾಸಭೆಯವರು ಈ ಸೂಚನೆಯನ್ನು ಒಮ್ಮತದಿಂದ ಪಾಸು ಮಾಡಿ ಮೇಲ್ಕಂಡ ಸೂಚನೆಯನ್ನು ಚೀಫ್ ಕಮಿಶನರಿಗೂ, ಕಮಿಶನರಿಗೂ, ಮತ್ತು ರಿಜಿಸ್ಟ್ರಾರ್ ಇನ್ಸ್‌ಪೆಕ್ಟರಿಗೂ ಕಳುಹಿಸುವಂತೆ ತೀರ್ಮಾನವಾಯಿತು.

ಅಧ್ಯಕ್ಷರು ಮೇಲ್ಕಂಡ ಠರಾವುಗಳನ್ನು ಅನುಮೋದಿಸಿ ಉಪಾಧ್ಯಾಯರ ವರ್ಗಾವರ್ಗಿಯ ವಿಷಯ ಹೀಗೆಂದು ಸೂಚಿಸಿದರು.

ಡಿಸ್ಟ್ರಿಕ್ಟ್ ಬೋರ್ಡು ಸ್ಥಾಪನೆಯಾದಲ್ಲಿಂದ ಇಂಥಾ ತೀರ್ಮಾನಕ್ಕೆ ಬರಬೆ ಇದ್ದು ಈಗ ತಾನೇ ಬಂದ ಡಿ. ಬೋರ್ಡಿನವರು ಬಡ ಉಪಾಧ್ಯಾಯರ ಮೇಲೆ ತಂಥಾ ಠರಾವನ್ನು ನೋಡಿದರೆ ತುಂಬಾ ಆಶ್ಚರ್ಯಕರವೆಂದು ಹೇಳಿದ್ದಲ್ಲದೆ ಹೀಗೆ ಉಪಾಧ್ಯಾಯರುಗಳನ್ನು ವರ್ಗಾವರ್ಗಿ ಮಾಡಬೇಕಾದರೆ ನ್ಯಾಯವಾದ ತಪ್ಪು ಕಂಡು ಬಾರದೇನೇ ಮತ್ತು ಆಯಾ ಪ್ರಾಂತ್ಯಗಳ ಜನರ ಅಭಿಪ್ರಾಯವನ್ನು ತೆಗೆದು ಕೊಳ್ಳದೆ ಮಾಡುವುದು ಬಹಳ ಅತೃಪ್ತಿಕರವೆಂದು ಹೇಳಿದರು. ಅಲ್ಲದೆ ಕೊಡಗಿನ ದೊಡ್ಡ ದೊಡ್ಡ ಉದ್ಯೋಗಸ್ಥರು ಅನೇಕ ವರ್ಷಗಳಿಂದ ಇದ್ದರೂ ಕೂಡ ಸರ್ಕಾರದವರು ಪರ್ಗಾವರ್ಗಿ ಮಾಡಿರುವುದಿಲ್ಲ ಎಂದು ಸಹ ಹೇಳಿದರು. ಇಂಥಾ ಖಾನೂನನ್ನು ಬಡ ಉಪಾಧ್ಯಾಯರ ಮೇಲೆ ಹೊರಿಸುವುದು ಯುಕ್ತನಲ್ಲವೆಂದು ವಿವರಿಸಿ ಸಭೆಯವರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

'ಹಾಜರಿದ್ದವ.'

ಕಾಂಗ್ರೆಸಿನ ಅಂತರ್ಗತ ಆಡಳಿತವು ಬದಲಾಗಬೇಕು.

ವರ್ಕಿಂಗ್ ಕಮಿಟಿಯಲ್ಲಿ ಮಹಾತ್ಮ ಗಾಂಧಿಯವರ ಭಾಷಣ.

'ಕಾಂಗ್ರೆಸ್ ಸಂಸ್ಥೆಗಳ ಅಂತರ್ಗತ ಆಡಳಿತೆಯಲ್ಲಿ ಲಂಚಗುಳಿತನವು ಸಂಪೂರ್ಣ ಅಳಿಯಬೇಕು. ಕಾಂಗ್ರೆಸ್ ಜನರಲ್ಲಿ ಹೆಚ್ಚು ಹೆಚ್ಚಾಗಿ ತಲೆದೋರುತ್ತಿರುವ ಹಿಂಸಾಮಯ ಭಾಷೆಯನ್ನು ಪರಿಹರಿಸಬೇಕು. ಇಲ್ಲದಂತಾಗಬೇಕು. ಯಾಕೆಂದರೆ ಕಾಂಗ್ರೆಸು ಅಧಿಕಾರ ಗ್ರಹಣ ಮಾಡಿದಂದಿನಿಂದ ಮುನ್ಸಣ ಹಾಗೂ ಭಾಷಣ ಸ್ವಾತಂತ್ರ್ಯಗಳ ಮೇಲಿನ ನಿರ್ಬಂಧವು ಹೋಮದರಿಂದ ಇಂಥಾ ಮನೋವೃತ್ತಿಯು ಬೆಳೆಯಹತ್ತಿದೆ.'

ಮುಂದುವರಿಸುತ್ತಾ ಅವರು-'ಕಾಂಗ್ರೆಸಿನಲ್ಲಿರುವ ದೋಷಗಳನ್ನು ಕಿತ್ತೊಗೆಯದಿದ್ದರೆ ಕಾಂಗ್ರೆಸಿನ ಇಂದಿನ ಶಕ್ತಿಯೇ ಅವರ ಮಹಾ ದೌರ್ಬಲ್ಯವಾಗಿ ಪರಿಣಮಿಸುವುದು. ಆದುದರಿಂದ ಇಂಥಾ ಹೇಯ ಮನೋವೃತ್ತಿಯನ್ನು ನಾಶಮಾಡುವುದು ವರ್ಕಿಂಗ್ ಕಮಿಟಿಯ ಕರ್ತವ್ಯವು' ಎಂದು ಹೇಳಿದರು.

ಈ ಸೂಚನೆಯನ್ನನುಸರಿಸಿ ವರ್ಕಿಂಗ್ ಕಮಿಟಿಯು ಪಾಸು ಮಾಡಿದ ಠರಾವು ಇನ್ನೊಂದೆಡೆ ಕೊಡಲಾಗಿದೆ.

ಕೊಡಗು ಮುಜ್ರ ಇಲಾಖಾ ಪ್ರೆಸಿಡೆಂಟರ ಆಫೀಸಿನಿಂದ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನಂದರೆ:-

ಶ್ರೀ ಭಾಗಮಂಡಲ ದೇವಸ್ಥಾನ, ಮಡಿಕೇರಿ ಶ್ರೀ ಓಂಕಾರೇಶ್ವರ ದೇವಸ್ಥಾನ ಮತ್ತು ರಾಜರ ಗದ್ದಿಗೆಗೆ ಸಹ 1939 ನೇ ಸಂವತ್ಸರದ ಖರ್ಚಿಗೆ ಬೇಕಾಗುವ ಅಂದಾಜು 70 ಗಾಡಿ ಬಿಳಿಯನ ಭತ್ತವನ್ನು ಸಪ್ಲೈ ಮಾಡತಕ್ಕ ಬಗ್ಗೆ ಕಂಟ್ರಾಕ್ಟು ಕೊಡಲ್ಪಡುತ್ತಿ. ಖಾಯಿಸ್ ಇರತಕ್ಕವರು ಗಾಡಿ ಒಂದರ ಅನರಪರ ರೇಟ್ ಬರೆದು ಸೀಲ್ ಮಾಡಿದ ಟೆಂಡರನ್ನು ಸನ್ 1939 ನೇ ಇಸವಿ ಜನವರಿ ತಾರೀಕು 20 ರ ಒಳಗೆ ಈ ಕೆಳಗೆ ಪಸ್ಕತ್ತು ಮಾಡಿರತಕ್ಕವರ ಹೆಸರಿಗೆ ತಲಪುವಂತೆ ಕಳುಹಿಸತಕ್ಕದ್ದು. ಅಲ್ಲದೆ ಮುಂಜೂರಾತಿ ಪಡಕೊಂಡವರು ಮುಂಗಡವಾಗಿ 100 ರೂಪಾಯಿಗಳನ್ನು ಡಿಪಾಜಿಟ್ಟು ಮಾಡಬೇಕಾಗಿದೆ. ವಾಯಿದೆಯ ನಂತರ ಬರತಕ್ಕ ಟೆಂಡರನ್ನು ಅಂಗೀಕರಿಸುವುದಿಲ್ಲವಾದ ಸಂಗತಿ ತಿಳಿಸಿದೆ.

ಅಲ್ಲದೆ

ಶ್ರೀ ಓಂಕಾರೇಶ್ವರ ದೇವಸ್ಥಾನಕ್ಕೆ ಸನ್ 1939 ನೇ ಸಂವತ್ಸರದ ಖರ್ಚಿಗೆ ಬೇಕಾಗುವ ಹೆಚ್ಚು ಕಮ್ಮಿ 50 ಗಾಡಿ ಸೌದೆಯನ್ನು ಸಪ್ಲೈ ಮಾಡತಕ್ಕ ಬಗ್ಗೆ ಕಂಟ್ರಾಕ್ಟು ಕೊಡುತ್ತೇವೆ. ಖಾಯಿಸ್ ಇರತಕ್ಕವರು ಗಾಡಿಯ ಉದ್ದ, ಅಗಲ, ಎತ್ತರ ನಮೂದಿಸಿ ಗಾಡಿ ಒಂದರ ಅನರಪರ ರೇಟ್ ಬರೆದು ಸನ್ 1939 ನೇ ಇಸವಿ ಜನವರಿ ತಾರೀಕು 20 ರ ಒಳಗೆ ಈ ಕೆಳಗೆ ಪಸ್ಕತ್ತು ಮಾಡಿರತಕ್ಕವರಿಗೆ ತಲಪುವಂತೆ ಕಳುಹಿಸತಕ್ಕದ್ದು. ವಾಯಿದೆಯ ನಂತರ ಬರತಕ್ಕ ದರಕಾಸ್ತುಗಳನ್ನು ಗಮನಿಸುವುದಿಲ್ಲವಾದ ವಿಷಯ ಸೂಚಿಸಿದೆ.

ಮಡಿಕೇರಿ,
ತಾ. 14-12-38.

ಕೆ. ಕಾಳಪ್ಪ,
(ಪ್ರೆಸಿಡೆಂಟ್.)

ಸೆಂಟ್ರಲ್ ಬ್ಯಾಂಕ್ ಮಿಟಿಂಗು.

(ನೆನೇ ಪುಟದಿಂದ ಸಾಗಿದ್ದು)

ಯವರೇ ಜುನಾಯಿಸಿ ಕಳುಹಿಸಬಹುದೆಂತಲೂ, ಸದರಿಯವರು ಅವರ ಸ್ವಂತ ಖರ್ಚು ಮತ್ತು ಸರ್ಕಾರೆದಿಂದ ಸಿಕ್ಕುವ ವೇತನದಿಂದ ತರಬೇತಿಗೆ ಹೋಗಲು ನಿಶ್ಚಿತ ಮಾಡಿಕೊಳ್ಳತಕ್ಕದ್ದೆಂದೂ ತೀರ್ಮಾನವಾಯಿತು.

23. ಕೊಡಗಿನಲ್ಲಿ ಚೆನ್ನಾಗಿ ಕೆಲಸ ಮಾಡುವ ಸೊಸೈಟಿಗಳ ಮತ್ತು ಸೆಕ್ರೆಟರಿಗಳ ಹೆಸರುಗಳನ್ನು ಬಹುಮಾನ ಕೊಡುವ ಉದ್ದಿಶ್ಯ ಜುನಾಯಿಸಿ ಕಳುಹಿಸಬೇಕೆಂದು ಬರುವ ಹತ್ತನೇ ಸಹಕಾರ ಸಮ್ಮೇಳನದ ಸ್ವಾಗತ ಕಮಿಟಿಯ ಗೌರವ ಕಾರ್ಯದರ್ಶಿಯವರು ಬರಕ್ಕೊಂಡ ಪತ್ರವನ್ನು ಓದಲಾಗಿ ಬಹುಮಾನ ಪಡೆಯಲು ಅರ್ಹವಾದ ಈ ಕೆಳಗಿನ ಸೊಸೈಟಿಗಳನ್ನು ಸೂಚಿಸಲಾಯಿತು.

(1) ಫ್ರೇಜರ್‌ಪೇಟೆ ಟೌನ್ ಸೊಸೈಟಿ. (2) ಅಮ್ಮತ್ತಿ ಕ್ರಾಪ್ ಲೋನ್ ಅಂಡ್ ಸೇಲ್ ಸೊಸೈಟಿ, (3) ದಕ್ಷಿಣ ಕೊಡಗು ಸಹಕಾರಿ ಸ್ಟೋರ್ಸ್, (4) ಅಮ್ಮತ್ತಿನಾಡು ಸಹಕಾರಿ ಯೂನಿಯನ್, (5) ಕೂಡಿಗೆ ಉತ್ತಮ ಜೀವನ ಸಂಘ, ಫ್ರೇಜರ್‌ಪೇಟೆ.

ಅಲ್ಲದೆ ಚೆನ್ನಾಗಿ ಕೆಲಸ ಮಾಡುವ ಗ್ರಾಮ ಸಂಘಗಳನ್ನೂ, ಸೆಕ್ರೆಟರಿಗಳನ್ನೂ ಆಯಾಯ ಸಹಕಾರಿ ಯೂನಿಯನ್‌ಗಳೇ ಜುನಾಯಿಸಬೇಕೆಂದು ತೀರ್ಮಾನವಾಯಿತು.

24. ಬ್ಯಾಂಕಿನ ಪರವಾಗಿ ಗೌರವ ಕಾರ್ಯದರ್ಶಿಯವರಾದ ಮೆ. ಪಿ. ಜಿ. ಐಯ್ಯಪ್ಪನವರು ತಿರುವಾಂಕೂರು ನೇಶನಲ್ ಅಂಡ್ ಕ್ವಿಲಾನ್ ಬ್ಯಾಂಕಿನ ಅಫಿಶಿಯಲ್ ಲಿಕ್ವಿಡೇಟರೊಂದಿಗೆ ಈ ಬ್ಯಾಂಕಿನ ಹಣವ ವಿಷಯ ಪತ್ರವ್ಯವಹಾರವೇ ಮೊದಲಾದ ವಿಶಿಷ್ಟ ಕೆಲಸಗಳನ್ನು ನಡಿಸುವಂತೆ ಅವರಿಗೆ ಅಧಿಕಾರ ಕೊಡುವಂತೆ ತೀರ್ಮಾನವಾಯಿತು.

25. ಮೆ. ಗಳಾದ ಪಳಂಗಂಡ ಕರುಂಬಯ್ಯನವರ ಮತ್ತು ಕುಂಬೆರ ಅಪ್ಪಣ್ಣನವರ ಅರ್ಜಿ ಮೇರೆ ಮೊದಲಿನವರು ಬ್ಯಾಂಕಿನಲ್ಲಿ ಪಡಕೊಂಡ ಶೇರುಗಳಲ್ಲಿ ಪೈಕಿ ಬಂದು ಶೇರನ್ನು ಎರಡನೇಯವರ ಹೆಸರಿಗೆ ವರ್ಗಾಯಿಸಲ್ಪಟ್ಟಿತು.

26. ನಿರಖು ಮುಡಿವ ವೇಳೆಗೆ ಸರಿಯಾಗಿ ತಾರೀಕು 23-10-38ರಲ್ಲಿ ಬ್ಯಾಂಕು ಮಿಟಿಂಗು ನಡಿಸಬೆ ಆ ತಾರೀಕ್ಕಾಗಿ ತಾನು ಸದರಿ ದಿನಸವ ಮಿಟಿಂಗಿಗೆ ಭಾಗಿಯಾಗದ್ದರಿಂದ ಆ ಮಿಟಿಂಗಿನ ಪ್ರೊಸಿಡಿಂಗ್ಸ್ ರದ್ದಾಗಿರತಕ್ಕದ್ದೆಂದು ಮೆ. ಬಿ. ಎ. ಬೆಳ್ಯಪ್ಪನವರು ಬರಕೊಂಡ ಪತ್ರವನ್ನು ಓದಲ್ಪಟ್ಟಿತು.

ಸದರಿ ಮಿಟಿಂಗ್ ಪ್ರೊಸಿಡಿಂಗ್ಸಿನಲ್ಲಿ ನಿರಖು ಮುಡಿವ ವೇಳೆಗೆ ಹರಿಯಾಗಿ ಮಿಟಿಂಗು ನಡಿಸಬೆ ಇದ್ದದ್ದರಿಂದ ಮೆ. ಬಿ. ಎ. ಬೆಳ್ಯಪ್ಪನವರು ಮಿಟಿಂಗಿನಲ್ಲಿ ಭಾಗವಹಿಸಲಿಲ್ಲ ಎಂದು ಸೇರಿಸುವಂತೆ ತೀರ್ಮಾನಿಸಲಾಯಿತು.

ಪಿ. ಜಿ. ಬೆಳ್ಯಪ್ಪ,
(ಅಧ್ಯಕ್ಷರು)

ವರ್ತಮಾನ ಸಂಗ್ರಹ.

ಒಳದೇಶ.

ತ್ರಿಪುರಿ ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಗಳಾಗಿ ಹೋಗಲು ಕೊಡಗಿಗೆ ಎರಡು ಸ್ಥಳ ಸಿಕ್ಕಿದೆಯೆಂದೂ, ಪ್ರತಿನಿಧಿಗಳ ಚುನಾವಣೆಯು ಜನವರಿ 8 ಕ್ಕೆ ಆಗುವದೆಂದೂ ತಿಳಿಯುತ್ತೇವೆ.

ಪುದುಕೋಟೆ ಮಹರಾಜ ಕಾಲೇಜಿನ ಸೈನ್ಸ್ ಲೆಕ್ಚರರ್ ಮತ್ತು ಕ್ರಿಕೆಟ್ ಕೋಚ್ ಆಗಿದ್ದ ಶ್ರೀ ಮಂಡೇಪಂಡ ಎ. ಉತ್ತಪ್ಪ ಬಿ. ಯಸ್. ಸಿ.ಯವರು ಸೌತ್ ಇಂಡಿಯಾ ರೈಲ್ವೆಯ ಅ. ಟ್ರಾಫಿಕ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರಾಗಿ ತಿಳಿಯುತ್ತೇವೆ.

ಮಡಿಕೇರಿ.

ಇಲ್ಲಿ ಏಲಕ್ಕಿ ಮಣಕ್ಕೆ ರೂ 31 ಕಾಫಿ ಖಂಡಿಗೆ ರೂ. 105 ಕ್ರಯವಿರುವದಾಗಿ ತಿಳಿಯುತ್ತೇವೆ.

ಈ ತಾರೀಕು 23 ರಿಂದ ಬರುವ ಜನವರಿ ತಾ. 2 ರ ವರೆಗೆ ಕ್ರಿಸ್‌ಮಸ್ ರಜೆಗಾಗಿ ಕೋರ್ಟು ಕಚೇರಿಗಳು ಮುಚ್ಚಲ್ಪಡುವವು.

ಡಿ. ಬೋರ್ಡಿನ ಬರುವ ವರ್ಷದ ಬಡ್ಜೆಟ್ಟನ್ನು ಸರಿಪಡಿಸಲು ಏರ್ಪಡಿಸಲ್ಪಟ್ಟಿರುವ ಉಪಸಮಿತಿಯ ಮೀಟಿಂಗು ಬರುವ ಜನವರಿ ತಾರೀಕು 7 ರಲ್ಲೂ, ಬೋರ್ಡಿನ ಮೆಂಬರುಗಳ ಮತ್ತು ವಿಶೇಷ ಮೀಟಿಂಗು ಜನವರಿ 17 ರಲ್ಲಿಯೂ ನಡೆಯುವದಾಗಿ ತಿಳಿಯಬರುತ್ತದೆ.

ಕೊಡಗು ನ್ಯಾಯವಿಧಾಯಕ ಸಭೆಯ ಫೈನಾನ್ಸು ಕಮಿಟಿಯ ಮೀಟಿಂಗು ಜನವರಿ ತಾ. 19 ರಲ್ಲಿ ಇಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ಯಂ. ಬಿ. ಬಿ. ಎಸ್ ತರಬೇತಿಗೆ ಹೋಗಿದ್ದ ಇಲ್ಲಿಯ ಲೇಡಿ ಡಾಕ್ಟರಾದ ಮಿಸ್. ಸಿ. ಎ. ಕುಂಜಾಲಿಯ ಮತ್ತು ವೀರಾಜಪೇಟೆ ಆ. ಸರ್ಜನರಾದ ಸಿ. ಬಿ. ಕಾರ್ಯಪ್ಪನವರು ತಾ. 15 ರಿಂದ ತಮ್ಮ ತಮ್ಮ ಕೆಲಸದ ಚಾರ್ಜನ್ನು ವಹಿಸಿಕೊಂಡಿರುವರೆಂದೂ, 1 ನೇ ಯಂ. ಬಿ. ಬಿ. ಎಸ್ ವರೀಕ್ಷೆಗೆ ಕೂತ ಇವರಲ್ಲಿ ಶ್ರೀ ಸಿ. ಎ. ಕುಂಜಾಲಿಯ ಇವರು ಮಾತ್ರ ತೇರ್ಗಡೆಯಾಗಿರುವರೆಂದೂ ತಿಳಿಯುತ್ತೇವೆ.

ಸಿದ್ದಾಪುರ.

ಅಭ್ಯತ್ ಮಂಗಲ ಗ್ರಾಮದಲ್ಲಿ ದನ ಕರಗಳಿಗೆ ತೊಂದರೆ ಕೊಡುತ್ತಿದ್ದ ಒಂದು ಕಿರುಬನನ್ನು ಶ್ರೀ ಬೇರಿಕೆ ಬಿದ್ದಪ್ಪನವರು ಕಳೆದ ತಾ. 28 ರಲ್ಲಿ ಗುಂಡು ಹೊಡೆದು ಕೊಂದರಾಗಿ ತಿಳಿಯುತ್ತೇವೆ.

ನಾಲ್ಕುನಾಡು.

ತಾ. 14-1-39 ರಲ್ಲಿ ಪಾಡಿದೇವ ಸ್ಥಾನದಲ್ಲಿ ಪಾಡಿನಾಲ್ಕುನಾಡಿನ ನಾಡು ತಕ್ಕರ ಮತ್ತು ಗ್ರಾಮ ಮುಖ್ಯಸ್ಥರ ಸಭೆ ಕೂಡುವದೆಂದೂ, ಅಲ್ಲಿ ಜಮ್ಮ ಮೂಪಿಳೆಯರು ಕದಿರು ತೆಗೆಯುವಾಗ್ಯೆ ಮತ್ತು ನಾಡುಕೋಲುಗಳಿಗೆ 'ಕೊಟ್ಟು-ಚೀನಿ'ಯನ್ನು ನಿಲ್ಲಿಸಿವ ವಿಚಾರ ಮುಂದೆ ಕೊಡವರೂ, ಮೂಪಿಳೆಯರೂ ಹೇಗೆ ವರ್ತಿಸಬೆಕೆಂಬ ಬಗ್ಯೆ ಚರ್ಚೆ ನಡೆಯುವದಾಗಿಯೂ ವರ್ತಮಾನ.

ಗೋಣಿಕೊಪ್ಪಲು.

ದಕ್ಷಿಣ ಕೊಡಗು ದನಗಳ ಪ್ರದರ್ಶನವು ಇಲ್ಲಿ ಬರುವ ಫೆಬ್ರವರಿ ತಾ. 3-4 ಮತ್ತು 5 ರಲ್ಲಿ ನಡೆಯುವದಾಗಿ ತಿಳಿಯುತ್ತೇವೆ.

ನಿಧನ ವಾರ್ತೆ.

ಬೇಂಗೂರು ಗ್ರಾಮದ ಶ್ರೀ ಪಟ್ಟಮಾಡ ಕೆ. ಪೊನ್ನಪ್ಪನವರು ಕಳೆದ ಭಾನುವಾರ ರಾತ್ರೆ ಮನೆಯೊಳಗಿಂದ ಹೊರಗೆ ಬಂದಾಗ ಯಾರೋ ಅವರಿಗೆ ಗುಂಡು ಹೊಡೆದುದರ ಪ್ರಯುಕ್ತ ಮೃತರಾದರೆಂದೂ, ಮಡಿಕೇರಿಯಲ್ಲಿರುವ ಶ್ರೀ ಮುಲ್ಲೆರ ಪೂವಯ್ಯನವರ ಪತ್ನಿಯವರು ತಾ. 17-12-38 ರಲ್ಲಿ ಶಿವಾಧೀನರಾದರೆಂದೂ ತಿಳಿಸಲು ವ್ಯಸನಪಡುತ್ತೇವೆ.

ವೀರಾಜಪೇಟೆ.

ತಾ. 18 ರಲ್ಲಿ ಅಖಿಲ ಕೊಡಗಿನ ಸಹಕಾರಿ ಸಮ್ಮೇಳನವು ಶ್ರೀಮಾನ್ ಯಜ್ಞನಾರಾಯಣ ಐಯ್ಯರ್ ಯಂ. ಎ. ಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ವಾರ್ಷಿಕ ಮಹಾಸಭೆಯು ತಾ. 17 ರಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರವರಾದ ಶ್ರೀ ಕೆ. ಜೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆ ಮೋಡಲ್ ಸ್ಕೂಲಿನಲ್ಲಿ ನಡೆಯಿತು.

ಶ್ರೀ ಪಿ. ಐ. ಬೆಳ್ಯಪ್ಪನವರು ಬ್ಯಾಂಕಿನ ಅಧ್ಯಕ್ಷರಾಗಿ 38-39 ನೇ ವರ್ಷಕ್ಕೆ ಸರ್ವಸಮ್ಮತದಿಂದ ಆರಿಸಲ್ಪಟ್ಟರು.

ಶ್ರೀಯುತರುಗಳಾದ (2) ಪುಲಿಯಂಡ ಐಯ್ಯಪ್ಪನವರು, (3) ರಾ. ಬ. ಪಟ್ಟಮಾಡ ದೇವಯ್ಯನವರು, (4) ಕೊಳ್ಳಿಮಾಡ ಕರುಂಬಯ್ಯನವರು, (5) ಕಂಜಿತಂಡ ಕುಶಾಲಪ್ಪನವರು ಬಿಡುಮೆಂಬರುಗಳ ಪರ ಡೈರೆಕ್ಟರುಗಳಾಗಿಯೂ, ಶ್ರೀಯುತರುಗಳಾದ, (6) ಐನಂಡ ಕಾರ್ಯಪ್ಪನವರು, (7) ಎಸ್. ಎನ್. ರಾಮಶೆಟ್ಟಿಯವರು, (8) ಎಚ್. ಯಂ. ಪುಷ್ಪಣ್ಣನವರು, (9) ಮಂಡೇಪಂಡ ಸೋಮಯ್ಯನವರು, (10) ಮಡೆಯಂಡ ದೇವಯ್ಯನವರು, (11) ಕಾಕಮಾಡ ಗಣಪತಿಯವರು, (ಕಿಗ್ಗಟ್ಟುನಾಡು ತಾಲೋಕಿನ ಪರವಾಗಿ) (12) ಬೆಟ್ಟೋಳಂಡ ಮಾಚಯ್ಯನವರು (ಪಾಡಿನಾಲ್ಕುನಾಡು ತಾಲೋಕಿನ ಪರವಾಗಿ) (13) ನಡಿಕೇರಿಯಂಡ ಸೋಮಯ್ಯನವರು (ಎಡೆನಾಲ್ಕುನಾಡು ತಾಲೋಕಿನ ಪರವಾಗಿ) (14) ಪಳಂಗಂಡ ಕರುಂಬಯ್ಯನವರು (ಮಡಿಕೇರಿನಾಡು ತಾಲೋಕಿನ ಪರವಾಗಿ) (15) ಶಂಕರಯ್ಯನವರು (ನಂಜರಾಯಪಟ್ಣ ತಾಲೋಕಿನ ಪರವಾಗಿ) ಸಂಘಗಳ್ಳಪರ ಡೈರೆಕ್ಟರುಗಳಾಗಿಯೂ ಬಹುಮತದಿಂದ ಆರಿಸಲ್ಪಟ್ಟರು.

ಮೀಟಿಂಗಿನ ವಿವರ ಬರುವ ವಾರ ಪ್ರಕಟಿಸಲಾಗುವದು.

ತಾ. 19 ರಲ್ಲಿ ಸಹಕಾರಿ ಇಲಾಖೆಯ ಸರಕಾರಿ ಮತ್ತು ಬಿನ್ ಸರಕಾರಿ ಉದ್ಯೋಗಸ್ಥರ ಪರಿಷತ್ತು, ಮತ್ತು ಸಹಕಾರಿ ಇಲಾಖೆಯವರ ಕೋ-ಆಪರೇಟಿವ್ ಸಂಘದ ಮಹಾ ಸಭೆಯೂ ಸಹಕಾರ ಸಂಘಗಳ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ನಡೆಯಿತು.

—೦೦—

ಹಿಂದೂದೇಶ.

ಜೋಧ್ಪುರವ ಮಹಾರಾಜರ ಆಮಂತ್ರಣದ ಮೇರೆಗೆ ಡ್ಯೂಕ್ ಆಫ್ ವಿಂಡ್ಸರರು ಸದ್ಯವೇ ಇಂಡಿಯಾಕ್ಕೆ ದಯಮಾಡುವರೆಂದು 'ಪೀಪಲ್' ಪತ್ರಿಕೆಯ ವಾರ್ತೆ.

ಕಾಂಗ್ರೆಸ್ ಪ್ರಾಂತವಲ್ಲದ ಪಂಜಾಬಿನಲ್ಲಿಯೂ, ಖಾದೀ ಕೈಗಾರಿಕೆಯ ಪ್ರಾಶಸ್ತ್ಯವನ್ನು ಒಪ್ಪಿಸರ್‌ಸಿಕಂದ್ದರರ ಮಂತ್ರಿಮಂಡಲವು ಅಲ್ಲಿನಖಾದೀ ಕೇಂದ್ರಗಳಿಗಾಗಿ 25 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುವುದಲ್ಲದೆ ಈ ಮೊತ್ತವನ್ನು ಹೆಚ್ಚಿಸುವುದರಲ್ಲಿಯೂ ಇದ್ದಾರೆ.

ಅಸ್ಸಾಂ ಪ್ರಾಂತದ ಹಿಂದುಳಿದ ಪಂಗಡಗಳ ವಿದ್ಯಾಭಿವೃದ್ಧಿಗಾಗಿ ವರ್ಷ ಒಂದಕ್ಕೆ ರೂ. 25 ಸಾವಿರದಂತೆ ಐದು ವರ್ಷಗಳ ವರೆಗೆ ಅಲ್ಲಿನ ಕಾಂಗ್ರೆಸ್ ಸಂಯುಕ್ತ ಮಂತ್ರಿ ಮಂಡಲಕ್ಕೆ ತಾವು ವಂತಿಗೆ ಕೊಡುವುದಾಗಿ ಶ್ರೀ. ಜಿ. ಡಿ. ಬಿರ್ಲಾರವರು ವಾಗ್ದಾನ ಮಾಡಿದ್ದಾರೆ.

ಶ್ರೀ ನಿಹಾರ ರಾಜಧಾರ ಎಂಬವರು ತ್ರಿಪುರಿಯಲ್ಲಿ ಜರಗುವ ಕಾಂಗ್ರೆಸ್ ಸಭೆಯನ್ನು ಕಾಣಲು ಸಿಲಹೆಟದಿಂದ ಕಲಕತ್ತಾದ ವರೆಗೆ ಬರೇ ಕಾಲಿನಿಂದ ಮತ್ತು ಒಂದೇ ಒಂದು ಪಂಚೆಯನ್ನುಟ್ಟು 400 ಮೈಲು ಪ್ರಯಾಣ ಮಾಡಿರುವರು. ಈ ಅಂತರವನ್ನು 19 ದಿನಗಳಲ್ಲಿ ನಡೆದಿದ್ದಾರೆ.

ಮದರಾಸ್ ಪಟ್ಟಣದ ಪೌರ ಸಭೆಯ ಸದಸ್ಯರು ಮಹಾತ್ಮ ಗಾಂಧಿಯವರ ವರ್ಧಂತಿ ದಿನ ಮುಂದಿನ ವರ್ಷದಿಂದ ರಜಾ ಕೊಡಬೇಕೆಂದು ತೀರ್ಮಾನ ಮಾಡಿ ಸರ್ಕಾರದ ಒಪ್ಪಿಗೆಯನ್ನು ಆಪೇಕ್ಷಿಸಿದರು. ಸರ್ಕಾರದವರು ಆ ತೀರ್ಮಾನದ ಮೇಲೆ ಏನೊಂದೂ ಹೇಳಿಕೆಯವರಾಗಿಲ್ಲವೆಂದು ತಿಳಿಯುತ್ತಿದೆ.

ಸಮಗ್ರ ಭಾರತ ಬ್ರಹ್ಮಚಾರಿಗಳ ಸಂಘವೊಂದನ್ನು ಸ್ಥಾಪಿಸಬೇಕು; ಅದಕ್ಕೆ ರಾಷ್ಟ್ರಪತಿಗಳಾದ ಶ್ರೀ. ಸುಭಾಷ್‌ಚಂದ್ರ ಭೋಸರವರು ಅಧ್ಯಕ್ಷರಾಗಬೇಕು-ಹೀಗೆಂದು ಸಿಂಧ್-ಹೈದರಾಬಾದಿನ ಕಾಂಗ್ರೆಸ್ಸಿಗರು ಮಂದಿ ಚರ್ಚಿಸಿ ನಿರ್ಧರಿಸಿದರೆಂದೂ, ಇಂಥಾ ಸಂಘದಿಂದ ದೇಶ ಸೇವೆಗೆ ಅನುಕೂಲವೆಂದು ರಾಷ್ಟ್ರಪತಿಗಳೂ ಒಪ್ಪಿರುವರೆಂದೂ, ಈ ಸಂಸ್ಥೆಯ ಮುಖ್ಯ ಕೇಂದ್ರವು ಬ್ರಹ್ಮಚಾರಿ ಕಾಂಗ್ರೆಸ್ ಮಂದಿಯಿಂದ ತುಂಬಿರುವ ಸಿಂಧ್ ಪ್ರಾಂತ್ಯದಲ್ಲಿಯೇ ಇರಬೇಕೆಂಬಉದ್ದೇಶವಿದೆಯೆಂದೂ ವಾರ್ತೆ.

ಹಿಂದೂಸ್ಥಾನದ ಸಮಸ್ತ ಇಲಾಖೆಗಳಲ್ಲಿಯೂ ಸಿವಿಲ್ ಸರ್ವಿಸ್ ಮತ್ತು ಹಿಂದೂಸ್ಥಾನದ ಸರ್ವಿಸ್ ಎಂಬೀ ಅಧಿಕಾರ ಸ್ಥಾನಗಳ ಸಂಬಳಗಳನ್ನು ಬ್ರಿಟಿಷ್ ಸರ ಕಾರದವರು ಘೋರ ಯುದ್ಧವಾದ ಮೇಲೆ ಧಾರಣೆವಾಸಿಗಳು ಹೆಚ್ಚಿವೆ ಎಂಬ ಕಾರಣಕ್ಕಾಗಿ ಬಡ್ತಿ ಮಾಡಿದರೆಂತಲೂ, ಈಗ ಧಾರಣೆವಾಸಿಗಳು ಬಹಳವಾಗಿ ಇಳಿದು ಹೋಗಿರುವದರಿಂದ ಅಂಥಾ ಅಧಿಕಾರಿಗಳ ಸಂಬಳವನ್ನು ಶೇಕಡ 10 ರಂತೆ ಕಡಿಮೆ ಮಾಡಬೇಕೆಂತಲೂ ಆಧಿಪತ್ಯಗಳ ಕಾಂಗ್ರೆಸ್ ಮಂತ್ರಿಗಳು ಒಪ್ಪಿ ಇಂಡಿಯಾ ಸ್ಟೇಟ್ಸ್ ಸೆಕ್ರೆಟರಿಯವರಿಗೆ ಮನವಿಮಾಡಿರುತ್ತಾರೆಂದು ಪ್ರಕಟವಾಗಿದೆ.

ಒರಿಸ್ಸಾ ಆಧಿಪತ್ಯಕ್ಕೆ ಸೇರಿದ ತಾಲ್ಚಾರ್ ಸಂಸ್ಥಾನದ ಪ್ರಜೆಗಳು ತಮ್ಮ ಈ ರಸರನ್ನು ಜವಾಬ್ದಾರಿ ಸರ್ಕಾರ ದಯಪಾಲಿಸಬೇಕೆಂದೂ, ಕಂದಾಯ ಕೌಳಿಗೆಗಳನ್ನು ಕಡಿಮೆಮಾಡಬೇಕೆಂದೂ ಪ್ರಾರ್ಥಿಸಿದರು. ಅವರಿಂದ ಪ್ರಯೋಜನವೇನೂ ಆಗಲಿಲ್ಲವಾಗಿ ಸುಮಾರು 20,000 ಜನರು ಆ ಸಂಸ್ಥಾನವನ್ನೇ ಬಿಟ್ಟು ಬ್ರಿಟಿಷ್ ಇಂಡಿಯಾದಲ್ಲಿ ನೆಲಸಲು ಹೋಗಿರುತ್ತಾರೆ. ತಾಲ್ಚಾರ್ ಸಂಸ್ಥಾನದ ಪ್ರಜಾ ಸಂಖ್ಯೆ ಸುಮಾರು 70,000 ವೆಂದು ತಿಳಿಯುವುದು. ಊರು ಬಿಟ್ಟು ಬಂದಿರುವವರ ಪಾಡು ದುಃಖಕರವಾಗಿದೆಯೆಂದು ಹೇಳಲಾಗಿದೆ.

ವಿದೇಶ

ಅಮೇರಿಕಕ್ಕೆ ಸೆಲ್ಲಬೇಕಾಗಿರುವ ಯುದ್ಧದ ಸಾಲದ ವಿಷಯದಲ್ಲಿ ಬ್ರಿಟನ್ನು ಕಾಲಹರಣ ಮಾಡುತ್ತಿದೆಯೆಂದು ಅಮೇರಿಕವರ ದೂರು. ಇದೇ ಡಿಶಂಬರ್ ತಾ. 15ಕ್ಕೆ ಅರ್ಧ ವರ್ಷದ ಕಂತಾಗಿ ಅಮೇರಿಕಕ್ಕೆ ಸಲ್ಲಬೇಕಾಗಿರುವ ಸಾಲದ ಮೊತ್ತ 123 ಮಿಲ್ಯ ಡಾಲರುಗಳು.

ಯುನೈಟೆಡ್ ಸ್ಟೇಟ್ಸಿನ ವರ್ಜಿನಾ ದ್ವೀಪಗಳ ಶಾಸನ ಸಭೆಯು ಯಹೂದಿಗಳಿಗೆ ಸ್ಥಳ ಕೊಡಬಹುದೆಂದು ಸೂಚಿಸಿ ಇಲ್ಲಿ 5 ಚಿಕ್ಕ ದ್ವೀಪಗಳ ಒಂದು ಗುಂಪು ಇದೆ. ಅದರ ಮೂರರಲ್ಲಿ ಮಾತ್ರ ಜನವಸತಿ ಇದೆ; ಮಿಕ್ಕವುಗಳಲ್ಲಿ ಇಲ್ಲವಾದ್ದರಿಂದ ಅಲ್ಲಿ ಯಹೂದಿಗಳು ನೆಲಸಲೆಂದು ಆ ಶಾಸನ ಸಭೆಯ ತೀರ್ಮಾನ. ಇದಕ್ಕೆ ಪ್ರೆಸಿಡೆಂಟ್ ರೂಸ್‌ವೆಲ್ಟರೇನೆನ್ನುವರೋ ನೋಡಬೇಕು.

ವೀರಶೈವ ಜನಾಂಗದ ಮೀಟಿಂಗು.

ದಕ್ಷಿಣ ಕೊಡಗು ವೀರಶೈವ ಜನಾಂಗದ ಜಮ್ಮ, ಜಹಗೀರು, ಸಾಗು ರೈತರು ಈ ತಾ. 1 ರಲ್ಲು ನೊಖ್ಯ ಗ್ರಾಮದಲ್ಲಿ ಭದ್ರಗೊಳದ ಎಸ್. ಸಿದ್ದಪ್ಪನವರ ಆಧ್ಯಕ್ಷತೆಯಲ್ಲಿ ಸೇರಿದ ಸಭೆಯ ತೀರ್ಮಾನಗಳು.

(1) ಕೊಡಗು ದೇಶವು ಈಗಿರುವಂತೆ ಪ್ರತ್ಯೇಕ ಆಡಳಿತದಲ್ಲಿರುವುದು ದೇಶದ ಆರ್ಥಿಕ, ರಾಜಕೀಯ, ಸಾಮಾಜಿಕ ಅಭಿವೃದ್ಧಿಗೆ ಕಂದುಕವೆಂದು ಈ ಸಭೆಯು ತೀರ್ಮಾನಿಸಿದೆ.

(2) ಕೊಡಗು ದೇಶವು ತನ್ನ ನೆರೆ ದೇಶವಾದ ಮೈಸೂರು ರಾಜ್ಯದೊಡನೆ ಸೇರಲು ಕೊಡಗು ಸರ್ಕಾರವು ತಕ್ಕ ಏರ್ಪಾಡುಗಳನ್ನು ಮಾಡಿಸಿಕೊಡಬೇಕಾಗಿ ಹಜರತ್ ಚೀಫ್ ಕಮಿಷನರ್ ಸಾಹೇಬರವರನ್ನು ಪ್ರಾರ್ಥಿಸಿಕೊಳ್ಳುವಂತೆ ತೀರ್ಮಾನಿಸಿತು.

ಯಸ್. ಸಿದ್ದಪ್ಪ,
(ಅಧ್ಯಕ್ಷ.)

ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಕೊಡಗಿನವರ ಡೆಪ್ಯುಟೇಷನ್.

ಕೊಡಗಿನ ಭವಿಷ್ಯತ್ತನ್ನು ಕುರಿತು ಹರಿಪುರ ಕಾಂಗ್ರೆಸ್ ಮಹಾಸಭೆಯಲ್ಲಿ ಪಾಸಾದ ನಿರ್ಣಯದ ವಿಷಯ ವಿವರಿಸಿ ಕೇಳಲಿಕ್ಕಾಗಿ ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯವರ ತೀರ್ಮಾನದಂತೆ ಕಳೆದ ಸೆಪ್ಟಂಬರ್ ತಿಂಗಳಲ್ಲಿ ಡೆಲ್ಲಿಯಲ್ಲಿ ನಡೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮಿಟಿಂಗಿಗೆ ಹೋಗಿದ್ದ ಡೆಪ್ಯುಟೇಷನಿನವರಿಗೆ ವರ್ಕಿಂಗ್ ಕಮಿಟಿಯವರಿಂದ ಸಿಕ್ಕಿದ ತೀರ್ಮಾನವನ್ನು ಪ್ರಕಟಿಸಲು ತಡವಾದದ್ದಕ್ಕೂ, ಆ ಸಂಬಂಧ ಉಂಟಾದ ಅಪಪ್ರಚಾರಕ್ಕೂ ತಕ್ಕ ಕಾರಣಗಳನ್ನು ಪತ್ರಿಕೆಗಳ ಮೂಲಕ ಪ್ರಕಟಿಸಬೇಕೆಂದು ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ತಾ. 19-12-38 ರಲ್ಲಿ ನಿಶ್ಚಯಿಸಿದ ಮೇರೆ ಈ ಪ್ರಕಟಣೆಯನ್ನು ಹೊರಡಿಸಿದ್ದಾಗಿದೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ನೇಮಿಸಿದ ಡೆಪ್ಯುಟೇಷನಿನವರು ಡೆಲ್ಲಿಯಲ್ಲಿ ವರ್ಕಿಂಗ್ ಕಮಿಟಿಯವರ ಮುಂದೆ ಕೊಡಗಿನ ಸಂಬಂಧ ಹರಿಪುರ ತರಾವಿನ ದೆಸೆಯಿಂದ ಕೊಡಗಿನ ಕಾಂಗ್ರೆಸಿನವರಿಗೆ ಬೇರೆ ಯಾವ ವಿಧದ ಅಭಿಪ್ರಾಯವನ್ನೂ ಸೂಚಿಸಲು ಸಾಧ್ಯವಿತ್ತಿಲ್ಲ. ಹರಿಪುರ ಕಾಂಗ್ರೆಸಿಗೆ ಶ್ರೀ ಸಿ. ಯಂ. ಪೂಣಚ್ಚನವರೊಬ್ಬರೇ ಕೊಡಗಿನಿಂದ ಪ್ರತಿನಿಧಿಯಾಗಿ ಹೋಗಿದದ್ದು. ಇವರು ಕೊಡಗನ್ನು ಪ್ರತ್ಯೇಕವಿಡಲು ವಿರೋಧಿಸುವವರು. ಹರಿಪುರ ತೀರ್ಮಾನವು ಕೊಡಗಿನ ಕಾಂಗ್ರೆಸಿನವರ ಮೇಲೆ ಬಂಧಿತವಾದದ್ದಲ್ಲವೆಂತಲೂ, ಕೊಡಗನ್ನು ಪ್ರತ್ಯೇಕ ಇಡುವ ಚಳವಳವನ್ನು ಕೊಡಗು ಕಾಂಗ್ರೆಸಿನವರು ನಡೆಸಲು ಅಡ್ಡಿ ಇಲ್ಲವೆಂತಲೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಕೊಟ್ಟ ತೀರ್ಪು ಮೆ. ಸಿ. ಯಂ. ಪೂಣಚ್ಚನವರಿಗೆ ರುಚಿಸದೆ ಇದ್ದಿರಬಹುದು. ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಅಭಿಪ್ರಾಯ ಇರುವವರಲ್ಲಿ ಕೆಲವರು ಡೆಪ್ಯುಟೇಶನಿನವರು ಹೊರಡಿಸಿದ ಪ್ರಕಟಣೆಯು ಅಧಿಕೃತವಾಪದ್ದಲ್ಲವೆಂತಲೂ, ಅವರು ನಿಜವಲ್ಲದ ಸಂಗತಿಗಳನ್ನು ಪ್ರಕಟಿಸಿರುವರೆಂತಲೂ ಅಪಪ್ರಚಾರ ಮಾಡಿರುವರೆಂದರೆ ತಪ್ಪಾಗಲಾರದು. ಇಲ್ಲವಾದರೆ ವರ್ಕಿಂಗ್ ಕಮಿಟಿಯವರ ಅಧಿಕೃತವಾದ ತೀರ್ಪು ಪತ್ರ ಮೂಲಕ ಕೊಡಗಿನ ಜಿಲ್ಲಾ ಕಾ. ಕಮಿಟಿಯ ಸೆಕ್ರೆಟರಿಯವರಿಗೆ ಸಿಕ್ಕಿದ್ದರೂ ಕೂಡ ಮೇಲೆ ಕಾಣಿಸಿದಂತ ಅಪಪ್ರಚಾರ ನಡೆಯಲು ಕಾರಣವಿರಲಿಲ್ಲ. ಆದ್ದರಿಂದ ಡೆಪ್ಯುಟೇಶನಿನವರು ವರ್ಕಿಂಗ್ ಕಮಿಟಿಯವರಿಂದ ಪಡೆದ ತೀರ್ಪಿನ ವಿಚಾರದಲ್ಲಿ ಯಾರೊಂದೂ ಸಂಶಯಪಡಲು ಎಡೆಯಿಲ್ಲ, ಇದು ಕಳೆದ ವಾರ ಪ್ರಕಟವಾದ ಕಾ. ಜನರಲ್ ಸೆಕ್ರೆಟರಿಯವರ ಪತ್ರದಿಂದ ವಿಷದವಿದೆ.

ಐ. ಪಿ. ಕಾರ್ಯಪ್ಪ,
ಜಿ. ಕಾ. ಕ. ಪ್ರೆಸಿಡೆಂಟ್.

ಈ ಪತ್ರವನ್ನು ಧೀರ್ಘಕಾಲ ಬಹಿರಂಗ ಪಡಿಸದೆ ಇದ್ದದ್ದಕ್ಕೆ ಡೆಪ್ಯುಟೇಶನಿನವರು ವರ್ಕಿಂಗ್ ಕಮಿಟಿಯವರನ್ನು ಕಾರಣ ಲಿಲ್ಲವೆಂತಲೂ, ಕಾಂಗ್ರೆಸ್ ಅಧ್ಯಕ್ಷರ ಯೂ ವರ್ಕಿಂಗ್ ಕಮಿಟಿಯವರ ಅಧಿಕಾರ ಯುಕ್ತವಾದ ತೀರ್ಮಾನವೇನೂ ಅವರಿಗೆ ದೊರೆತಿಲ್ಲವೆಂತಲೂ, ವರ್ಕಿಂಗ್ ಕಮಿಟಿಯ ಒಬ್ಬಿಬ್ಬ ಮೆಂಬರರ ಬಾಯಿಮಾತಿನ ಮೇರೆ ಡೆಪ್ಯುಟೇಷನಿನವರು ಕೊಡಗಿನ ಭವಿಷ್ಯತ್ತಿನ ವಿಚಾರವಾಗಿ ಕೊಡಗಿನ ಜನರು ತಪ್ಪು ಇಚ್ಛಾನುಸಾರ ಚಳವಳ ನಡಿಸಬಹುದೆಂದು ಪ್ರಚಾರ ಮಾಡುತ್ತಿರುವರೆಂದೂ ಪತ್ರಿಕೆಗಳ ಮೂಲಕವೂ, ವ್ಯಕ್ತಿಗಳ ಮೂಲಕವೂ ಅಪಪ್ರಚಾರ ನಡೆಸಲು ಎಡೆಕೊಟ್ಟಂತಾಯಿತು. ಕೊಡಗನ್ನು ಮದ್ರಾಸು ಕರ್ನಾಟಕಕ್ಕೆ ಸೇರಿಸಬಹುದೆಂಬ ಜನರ ಕೋರಿಕೆಗೆ ವತ್ತಾಸೆಯನ್ನೀಯುತ್ತದೆಂಬ ಹರಿಪುರದಲ್ಲಿ ಪಾಸಾದ ತರಾವಿನ ದೆಸೆಯಿಂದ ಕೊಡಗಿನ ಕಾಂಗ್ರೆಸಿನವರಿಗೆ ಬೇರೆ ಯಾವ ವಿಧದ ಅಭಿಪ್ರಾಯವನ್ನೂ ಸೂಚಿಸಲು ಸಾಧ್ಯವಿತ್ತಿಲ್ಲ. ಹರಿಪುರ ಕಾಂಗ್ರೆಸಿಗೆ ಶ್ರೀ ಸಿ. ಯಂ. ಪೂಣಚ್ಚನವರೊಬ್ಬರೇ ಕೊಡಗಿನಿಂದ ಪ್ರತಿನಿಧಿಯಾಗಿ ಹೋಗಿದದ್ದು. ಇವರು ಕೊಡಗನ್ನು ಪ್ರತ್ಯೇಕವಿಡಲು ವಿರೋಧಿಸುವವರು. ಹರಿಪುರ ತೀರ್ಮಾನವು ಕೊಡಗಿನ ಕಾಂಗ್ರೆಸಿನವರ ಮೇಲೆ ಬಂಧಿತವಾದದ್ದಲ್ಲವೆಂತಲೂ, ಕೊಡಗನ್ನು ಪ್ರತ್ಯೇಕ ಇಡುವ ಚಳವಳವನ್ನು ಕೊಡಗು ಕಾಂಗ್ರೆಸಿನವರು ನಡೆಸಲು ಅಡ್ಡಿ ಇಲ್ಲವೆಂತಲೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಕೊಟ್ಟ ತೀರ್ಪು ಮೆ. ಸಿ. ಯಂ. ಪೂಣಚ್ಚನವರಿಗೆ ರುಚಿಸದೆ ಇದ್ದಿರಬಹುದು. ಕೊಡಗನ್ನು ಮದ್ರಾಸಿಗೆ ಸೇರಿಸಬೇಕೆಂಬ ಅಭಿಪ್ರಾಯ ಇರುವವರಲ್ಲಿ ಕೆಲವರು ಡೆಪ್ಯುಟೇಶನಿನವರು ಹೊರಡಿಸಿದ ಪ್ರಕಟಣೆಯು ಅಧಿಕೃತವಾಪದ್ದಲ್ಲವೆಂತಲೂ, ಅವರು ನಿಜವಲ್ಲದ ಸಂಗತಿಗಳನ್ನು ಪ್ರಕಟಿಸಿರುವರೆಂತಲೂ ಅಪಪ್ರಚಾರ ಮಾಡಿರುವರೆಂದರೆ ತಪ್ಪಾಗಲಾರದು. ಇಲ್ಲವಾದರೆ ವರ್ಕಿಂಗ್ ಕಮಿಟಿಯವರ ಅಧಿಕೃತವಾದ ತೀರ್ಪು ಪತ್ರ ಮೂಲಕ ಕೊಡಗಿನ ಜಿಲ್ಲಾ ಕಾ. ಕಮಿಟಿಯ ಸೆಕ್ರೆಟರಿಯವರಿಗೆ ಸಿಕ್ಕಿದ್ದರೂ ಕೂಡ ಮೇಲೆ ಕಾಣಿಸಿದಂತ ಅಪಪ್ರಚಾರ ನಡೆಯಲು ಕಾರಣವಿರಲಿಲ್ಲ. ಆದ್ದರಿಂದ ಡೆಪ್ಯುಟೇಶನಿನವರು ವರ್ಕಿಂಗ್ ಕಮಿಟಿಯವರಿಂದ ಪಡೆದ ತೀರ್ಪಿನ ವಿಚಾರದಲ್ಲಿ ಯಾರೊಂದೂ ಸಂಶಯಪಡಲು ಎಡೆಯಿಲ್ಲ, ಇದು ಕಳೆದ ವಾರ ಪ್ರಕಟವಾದ ಕಾ. ಜನರಲ್ ಸೆಕ್ರೆಟರಿಯವರ ಪತ್ರದಿಂದ ವಿಷದವಿದೆ.

ಐ. ಪಿ. ಕಾರ್ಯಪ್ಪ,
ಜಿ. ಕಾ. ಕ. ಪ್ರೆಸಿಡೆಂಟ್.

ಕೊಡಗು ಸಹಕಾರ ಸಂಘಗಳ ರಿಜಿಸ್ಟ್ರಾರರವರ ಆಫೀಸ್,
ಮಡಿಕೇರಿ, ತಾ. 21 ನೇ ಡಿಸೆಂಬರ್, 1938.

ಪ್ರಕಟಣೆ.

ಇಂಡಿಯಾ ಸರಕಾರವವರು ವ್ಯವಸಾಯದ ಉತ್ಪತ್ತಿಗಳ ಸಂಬಂಧವಾಗಿ ಜಾರಿಗೆ ತಂದಿರುವ 1937 ನೇ ಇಸವಿಯ I ನೇ ಆಕ್ಟನ್ನು ಸರ್ವಸ್ಥ ಜನರ ಅವಗಾಹನೆಗೆ ಬಗ್ಗೆ ಈ ಕೆಳಗೆ ಪ್ರಕಟಿಸಲಾಗಿದೆ.

ಕೆ. ಚಂಗಪ್ಪ,
ರಿಜಿಸ್ಟ್ರಾರ್.

1937 ಇಸವಿ ನಂಬ್ರ I ನೇ ಆಕ್ಟ್.

ವ್ಯವಸಾಯದ ಉತ್ಪತ್ತಿಗಳನ್ನು ತರಗತಿ ವಾರು ವಿಂಗಡಿಸುವ ಬಗ್ಗೆ ಮತ್ತು ಆ ವಸ್ತುಗಳಿಗೆ ಗುರುತು ಮಾಡಲು ಅನುಕೂಲಿಸುವಂತೆ ಮಾಡಿದ ಆಕ್ಟ್.

ವ್ಯವಸಾಯದ ಉತ್ಪತ್ತಿಗಳನ್ನು ತರಗತಿಗಳನ್ನು ವಿಂಗಡಿಸಲು ಮತ್ತು ಗುರುತು ಮಾಡಲು ಅನುಕೂಲಪಡಿಸುವುದು ಯುಕ್ತವಾದ ಕಾರಣ ಈ ಕೆಳಗಿನ ಮೇರೆ ವಿಧಿಸಿದೆ.

ಚಿಕ್ಕ ಹೆಸರು ಮತ್ತು ವಿಸ್ತಾರ.

I (1) ಈ ಆಕ್ಟ್ 1937 ನೇ ಇಸವಿ ವ್ಯವಸಾಯದ ಉತ್ಪತ್ತಿಗಳ ತರಗತಿವಾರು ವಿಂಗಡಿಸುವ ಮತ್ತು ಗುರುತು ಮಾಡುವ ಆಕ್ಟ್ ಎಂದು ಕರೆಯಲ್ಪಡಬಹುದು.

(2) ಇದು ಬರ್ಮಾ ವಿನಹ ಬ್ರಿಟಿಷ್ ಬಲೂಚಿಸ್ಥಾನದ ಮತ್ತು ಸೋಂತಾಲ್ ಪರಗಣಿಗಳನ್ನೊಳಗೊಂಡು ಇಡೀ ಬ್ರಿಟಿಷ್ ಹಿಂದೂಸ್ಥಾನಕ್ಕೆ ಅನ್ವಯಿಸುತ್ತದೆ.

(3) ಈ ಆಕ್ಟಿನಲ್ಲಿ ಮೂಲ ವಿಷಯ ಮತ್ತು ವಿಷಯದ ಸಂಬಂಧದಿಂದ ವಿರೋಧ ಅರ್ಥವು ಕಂಡುಬಂದ ಹೊರತು.

(a) ವ್ಯವಸಾಯದ ಉತ್ಪತ್ತಿಯೆಂದರೆ ಕೃಷಿ, ಯಾ ತೋಟಗಳ ಉತ್ಪತ್ತಿ ಮತ್ತು ಈ ಉತ್ಪತಿಗಳಿಂದ ಪೂರ್ತಿಯಾಗಿ ಯಾ ಅಂಶವಾಗಿ ತಯಾರಿಸಿದ ಆಹಾರ ರ ಯಾ ಪಾನೀಯ ವಸ್ತುಗಳು ಮತ್ತು ಪ್ರಾಣಿಗಳ ಉಣ್ಣೆ ಮತ್ತು ಚರ್ಮಗಳು.

(b) ಠಕಾರಿಕೆ ಎಂಬ ಶಬ್ದಕ್ಕೆ ಇಂಡಿಯನ್ ಪಿನಲ್ ಕೋಡಿನ 28 ನೇ 1860 ರ XLV ಸೆಕ್ಷನಿನಲ್ಲಿ ಈ ಶಬ್ದಕ್ಕೆ ಕೊಡಲ್ಪಟ್ಟಿರುವ ಅರ್ಥವಿರುತ್ತೆ.

(c) ಹೊದಿಕೆ ಎಂಬುದು ಯಾವುದೇ ರೀತಿಯ ಪಾತ್ರೆ, ಪೆಟ್ಟಿಗೆ, ಸೆಟಾರಿ ಮುಸುಕು, ತಟ್ಟೆ, ಅಥವ ಇನ್ನಿತರ ಪದಾರ್ಥಗಳನ್ನು ಹಾಕಿಡುವ ಸಾಮಗ್ರಿಗಳಾಗಿವೆ.

(d) ದರ್ಜೆ ಹೆಸರು ಎಂದರೆ ತಖ್ತೆಯಲ್ಲಿ (ಶೆಡ್ಯೂಲ್‌ನಲ್ಲಿ) ಕಾಣಿಸಿರುವ ಯಾವುದೇ ಪದಾರ್ಥದ ಗುಣವನ್ನು ಸೂಚಿಸುವ ನಿಯಮಿತ ಹೆಸರು.

(e) ಸೂಚಿಸುವ ದರ್ಜೆ ಎಂದರೆ ಯಾವುದೇ ತರಗತಿಯ ಹೆಸರನ್ನು ಸೂಚಿಸಲು ನಿಯಮಿಸಿದ ಒಂದು ಚಿಹ್ನೆ.

(f) ಯಾವುದೇ ಪದಾರ್ಥಕ್ಕೆ ಸಂಬಂಧ ಪಟ್ಟ ಗುಣವು 'ಆ ಪದಾರ್ಥದ ಅವಸ್ಥೆ ಮತ್ತು ಸ್ಥಿತಿಯನ್ನೊಳಗೊಂಡಿದೆ.'

(g) 'ನಿಯಮಿತ' ಅಂದರೆ ಈ ಆಕ್ಟನ್ನು ಅನುಸರಿಸಿ ಮಾಡಿದ ಕ್ರಮಗಳಿಂದ ಗೊತ್ತುಮಾಡಲ್ಪಟ್ಟ ಎಂದರ್ಥ.

(h) 'ಶೆಡ್ಯೂಲಿಗೆ ಸೇರಿಸಿದ ಪದಾರ್ಥ ಪೆಂದರೆ ಶೆಡ್ಯೂಲಿನಲ್ಲಿ ನಮೂದುಳ್ಳ ಯಾವುದೇ ಪದಾರ್ಥವೆಂದರ್ಥ ಮತ್ತು

(i) ಒಂದು ಪದಾರ್ಥವೇ ಆಗಲಿ ಅಥವ ಅದರ ಹೊದಿಕೆಯೇ ಆಗಲಿ ಯಾ ಅದಕ್ಕೆ ಸೇರಿದ ಚೀಟಿಯೇ ಆಗಲಿ ಒಂದು ತರಗತಿಯ ಹೆಸರಿನ ಚಿಹ್ನೆಯಿಂದ ಗುರ್ತು ಮಾಡಲ್ಪಟ್ಟಿದ್ದರೆ ಆ ಪದಾರ್ಥವು ಒಂದು ತರಗತಿಯ ಚಿಹ್ನೆಯಿಂದ ಗುರ್ತು ಮಾಡಲ್ಪಟ್ಟಿದೆ ಎಂದು ಹೇಳಲ್ಪಡುವುದು.

ತರಗತಿವಾರು ಹೆಸರುಗಳನ್ನು ಗೊತ್ತುಮಾಡುವಿಕೆ.

3. ಗಜಿಟ್ ಆಫ್ ಇಂಡಿಯಾದಲ್ಲಿ ಮುಂಚಿತವಾಗಿ, ಇಸ್ತಿಯಾರುನಾಮೆಯ ಮೂಲಕ ಪ್ರಕಟಣೆ ಮಾಡಿದ ನಂತರ ಗವರ್ನರ್ ಜನರಲ್ ಇನ್‌ಕೌನ್ಸಿಲ್‌ರವರು ಈ ಕೆಳಗಿನ ವಿಷಯಗಳನ್ನು ಕುರಿತು ಕಾಯಿದೆ ಮಾಡಬಹುದು.

(a) ಯಾವುದೇ ಶೆಡ್ಯೂಲಿಗೆ ಸೇರಿಸಿದ ಪದಾರ್ಥದ ಗುಣವನ್ನು ಸೂಚಿಸುವ ತರಗತಿವಾರು ಹೆಸರಿನ ಚಿಹ್ನೆಗಳನ್ನು ನಿಯಮಿಸುವ ಬಗ್ಗೆ;

(b) ಪ್ರತಿ ತರಗತಿಯ ಹೆಸರು ಸೂಚಿಸುವ ಗುಣವನ್ನು ವಿಷದಗೊಳಿಸುವ ಬಗ್ಗೆ;

(c) ಆಯಾಯ ತರಗತಿಯ ಹೆಸರುಗಳನ್ನು ಸೂಚಿಸಲು ತರಗತಿವಾರು ಹೆಸರಿನ ಚಿಹ್ನೆಗಳನ್ನು ಗೊತ್ತುಮಾಡುವ ಬಗ್ಗೆ;

(d) ಯಾವುದೇ ಪದಾರ್ಥವನ್ನು ಯಾ ಅದರ ಹೊದಿಕೆಯನ್ನು ಯಾ ಅದಕ್ಕೆ ತಗಲಿಸಿದ ಚೀಟಿಯನ್ನು ಆ ಪದಾರ್ಥಕ್ಕೆ ಗೊತ್ತುಮಾಡಲ್ಪಟ್ಟ ತರಗತಿಯ ಚಿಹ್ನೆಯಿಂದ ಗುರ್ತಿಸುವ ಹಕ್ಕನ್ನು ನಿಯಮಿಸಲ್ಪಟ್ಟ ಯಾವುದೇ ಕಾಯಿದೆಗಳಿಗೊಳಪಟ್ಟು ಯಾವನೇ ಒಬ್ಬನಿಗೆ ಯಾ ಒಂದು ಸಮುದಾಯಕ್ಕೆ ಕೊಡುವ ಬಗ್ಗೆ;

(e) ಕ್ಲಾಸ್ (d) ಯಲ್ಲಿ ಸೂಚಿಸಿದ ಕಾಯಿದೆಗಳನ್ನು ಯಾವುದೇ ಪದಾರ್ಥಕ್ಕೆ ಗುರ್ತು ಕೊಡುವ ರೀತಿ ಮತ್ತು ಪ್ಯಾರ್ ನೂಡುವ ರೀತಿ ಯೂ ಅದಕ್ಕಾಗಿ ಉಪಯೋಗಿಸುವ ರೀತಿ ಹೊದಿಕೆಯ ನಮೂನೆ ಮತ್ತು ಪ್ರತಿ ಒಂದು ಹೊದಕ್ಕೆಯೊಳಗೆ ಇಡಬಹುದಾಧೆ ತೂಕದ ಪರಿಮಾಣ ಯಾ ಸಂಖ್ಯೆ ಇತ್ಯಾದಿಗಳ ಬಗ್ಗೆ;

(f) ಒಂದು ತರಗತಿಯ ಹೆಸರಿನ ಚಿಹ್ನೆಯನ್ನು ತಯಾರಿಸಲು ಅವಶ್ಯವಾದ ಸಲಕರಣೆಗಳನ್ನು ತಯಾರಿಸಲು ಯಾ ಉಪಯೋಗಿಸಲು ಅಥವಾ ತರಗತಿಯ ಹೆಸರಿನ ಚಿಹ್ನೆಯಿಂದ ಗುರ್ತು ಮಾಡಲ್ಪಟ್ಟ ಹೊದಿಕೆ ಯಾ ಚೀಟಿಗಳನ್ನು ಉಪಯೋಗಿಸಲು ಯಾ ತಯಾರಿಸಲು ತಾಗಿದ ಖರ್ಚು ಪಾವತಿ ಮಾಡುವ ಬಗ್ಗೆ ಮತ್ತು;

(g) ಗೊತ್ತುಮಾಡಲ್ಪಟ್ಟ ತರಗತಿಯ ಹೆಸರಿನ ಚಿಹ್ನೆ ಇಲ್ಲದೆ ಬೇರೆ ರೀತಿಯಲ್ಲಿ ಗುರ್ತಿಸಲ್ಪಟ್ಟ ಉತ್ಪತ್ತಿಗಳನ್ನು ಜಪ್ತಿ ಮಾಡಲು ಮತ್ತು ಏಲೇವಾರಿ ಮಾಡಲು ಅನುಕೂಲಿಸುವ ಬಗ್ಗೆ;

ಈ ಆಕ್ಟಿಗೆ ಒಳಪಡದೆ ತರಗತಿಯ ಹೆಸರಿನ ಚಿಹ್ನೆಯಿಂದ ಗುರ್ತು ಮಾಡಿದಕ್ಕೆ ಶಿಕ್ಷೆ ಸೆಕ್ಷನ್.

(4) ಶೆಡ್ಯೂಲಿಗೆ ಸೇರಿದ ಯಾವುದೇ

ಪದಾರ್ಥವನ್ನು ಸೆಕ್ಷನ್ 3 ರ ಮೇರೆ ತಕ್ಕ ಹುಕುಂ ಇಲ್ಲದೆ ತರಗತಿಯ ಹೆಸರಿನ ಚಿಹ್ನೆಯಿಂದ ಗುರ್ತಿಸುವವನು 500 ರೂ ಸಾಯಿಗಳ ವರೆಗಿನ ಜುಲ್ಮಾನೆಯಿಂದ ಶಿಕ್ಷಿಸಲ್ಪಡುವನು.

ತರಗತಿ ಯಾ ಹೆಸರಿನ ಚಿಹ್ನೆಯನ್ನು ಅನುಕರಿಸಿದಕ್ಕೆ ಶಿಕ್ಷೆ.

(5) ಯಾವುದೇ ತರಗತಿವಾರು ಹೆಸರಿನ ಚಹ್ನೆಯನ್ನು ತಕಾರಿಕೆಗಾಗಿ ಅನುಕರಿಸಿದ್ದಕ್ಕೆ ಅಥವಾ ಅನುಕರಿಸುವುದಕ್ಕಾಗಿ ಯಾವುದೇ ಬಣ್ಣ ಸ್ಲೇಟು ಯಾ ಇನ್ನಿತರ ಸಲಕರಣೆಗಳು ತನ್ನ ವಶದಲ್ಲಿ ಇಟ್ಟುಕೊಂಡಿರುವುದು 2 ವರ್ಷದ ವರೆಗಿನ ಸಜ. ಯಾ ಜುಲ್ಮಾನೆ ಅಥವಾ ಈ 2 ಬಗೆಯಿಂದಲೂ ಶಿಕ್ಷಿಸಲ್ಪಡುವನು.

ಆಕ್ಟು ಲಗಾವಾಗುವಿಕೆ.

(6) ಗವರ್ನರ್ ಜನರಲ್ ಇನ್‌ಕೌನ್ಸಿಲ್‌ರವರು ಈ ಆಕ್ಟಿನ ಪಟ್ಟಿಯಲ್ಲಿ ಸೇರಿದ ಯಾವದೇ ವ್ಯವಸಾಯದ ಉತ್ಪತ್ತಿಯನ್ನು ಕುರಿತು ಆದನ್ನು ಸೇರಿಸದ್ದರಿಂದ ಕೆಡುಕುಂಟೆಂದು ತನಗೆ ಯುಕ್ತವೆಂದು ತೋರಿದ ರೀತಿಯಲ್ಲಿ ಆಲೋಚಿಸಿದ ಮೇರೆ ಗಜಿಟ್ ಆಫ್ ಇಂಡಿಯಾದಲ್ಲಿ ನೋಟಿಫಿಕೇಶನ್ ಮೂಲಕ ಆ ಉತ್ಪತ್ತಿಗೂ, ಆಕ್ಟು ಲಗಾವಾಗುತ್ತೆಂದು ಹೇಳಬಹುದು. ಮತ್ತು ಆ ರೀತಿಯ ನೋಟಿಫಿಕೇಶನು ಪ್ರಕಟಣೆಯಾಪ ಮೇಲೆ ಅಂಥಾ ಪದಾರ್ಥವು ಶೆಡ್ಯೂಲ್‌ನಲ್ಲಿ ಸೇರಿಸಲ್ಪಟ್ಟಿದೆಯೆಂದು ಎಣಿಸಲಾಗುವುದು.

ಶೆಡ್ಯೂಲ್.

(ಸೆಕ್ಷನು 2 ನ್ನು ನೋಡಿ)

1. ಹಣ್ಣು
2. ತರಕಾರಿ
3. ಮೊಟ್ಟೆ
4. ಕರಾವಿನ ಉತ್ಪತ್ತಿ
5. ಹೊಗೆಸೊಪ್ಪು.
6. ಕಾಫಿ.
7. ಚಕ್ಕಳಗಳು ಮತ್ತು ಚರ್ಮಗಳು.

ದಿ ಗಾರ್ಡಿಯನ್ ಆಫ್ ಇಂಡಿಯಾ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಮದ್ರಾಸು.

ಹೊಸ ಉದ್ಯೋಗ:—ಈ ವರ್ಷದಲ್ಲಿ 52,54,750 ರೂ. ಭರವಸೆಯ 4689 ಪ್ರಪೋಸಲ್‌ಗಳು ಸಿಕ್ಕಿವೆ. ಅದರಲ್ಲಿ ಹಿಂದಿನ ವರ್ಷದ ಪೂರ್ತಿಯೊಗದ 1447 ಪ್ರಪೋಸಲ್‌ಗಳ ಬಾಬ್ತು 40,67,650 ರೂ. ಗಳ ಬಗ್ಗೆ ವರ್ಷಾವಧಿ 2,21,959-6-0 ರೂ. ವಿಮೂ ಕಂತು ಬರುತ್ತೆ. ಕಂಪೆನಿಯಿಂದ ಭರವಸೆ ಪಡೆದಿರುವ ಹಣ ರೂ. 39,38,150. ಬಾಕಿ ರೂ. 1,29,500 ಪುನಹ ಭರವಸೆ ಕೊಟ್ಟಿದ್ದಾಗಿದೆ. ಬಾಕಿ ಇರುವ ಪ್ರಪೋಸಲ್‌ಗಳು ವರ್ಷಾಂತ್ಯದಲ್ಲಿ ತಿರಸ್ಕರಿಸಲು, ಮುಂದುವರಿಸಲು ಇಲ್ಲವೇ ಪೂರ್ತಿಗೊಳ್ಳಲು ಕಾಯುತ್ತಿವೆ. ಈ ವರ್ಷದ ಹೊಸ ಉದ್ಯೋಗವು ಕಳೆದ ವರ್ಷದ ಹೊಸ ಉದ್ಯೋಗಕ್ಕಿಂತ ರೂ. 4,13,775 ಹೆಚ್ಚಿದೆ.

ಈ ಕೆಳಗಿನ ಒಳ್ಳೆ ಸಂಗತಿಗಳಿಂದ ಲಭಿಸಿದ ತೃಪ್ತಿಯನ್ನು ಪೆಂಬರುಗಳೊಡನೆ ಅನುಭವಿಸಲು ಡೈರೆಕ್ಟರುಗಳು ಇಷ್ಟಪಡುತ್ತಾರೆ.

ಇಂಡಿಯಾ ಸರ್ಕಾರದ ಭರವಸೆಯಿಂದ ಜೀವವಿಮೆ ಕೆಲಸ ಮಾಡುವ 215 ಇಂಡಿಯನರ ಕಂಪೆನಿಗಳಿವೆಯೆಂದು ಈಗ ಪ್ರಕಟಿಸಲ್ಪಟ್ಟಿರುವ 'ಇಂಡಿಯನ್ ಇನ್ಶ್ಯೂರೆನ್ಸ್ ಈಯರ್ ಬುಕ್' ಎಂಬುವುದರಿಂದ ತಿಳಿದುಬರುತ್ತದೆ. ಈ ಕಂಪೆನಿಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾವು ಹೊಸ ಉದ್ಯೋಗಗಳ ದೃಷ್ಟಿಯಿಂದ ಮೊದಲಿನ 20 ಕಂಪೆನಿಗಳೊಳಗೆ ತನ್ನ ಸ್ಥಾನವನ್ನು ಪಡೆದಿದೆ. ಈ ಸಂಗತಿಯು ಇದಕ್ಕಿಂತ ಅನೇಕ ವರ್ಷಗಳ ವರೆಗೆ ಶ್ರಮಿಸುತ್ತಿರುವ ಸಂಸ್ಥೆಗಳ ದೃಷ್ಟಿಯಿಂದ ಗಣನೀಯವಾಗಿದೆ. ದಕ್ಷಿಣ ಭಾರತದಲ್ಲಿ ಹೆಡ್ಡಾಫೀಸುಗಳುಳ್ಳ ಸಂಸ್ಥೆಗಳಲ್ಲಿ ಗಾರ್ಡಿಯನ್ ಆಫ್ ಇಂಡಿಯಾದ ಹೊಸ ಉದ್ಯೋಗವು ಎರಡನೇಯದಾಗಿದೆ. ಒಂದನೇಯದು ಒಂದು ಕಂಪನಿಯು ಇದಕ್ಕಿಂತ 25 ವರ್ಷಗಳ ಮುಂಚೆ ಸ್ಥಾಪಿಸಲ್ಪಟ್ಟಿದ್ದಾಗಿದೆ.

ವಿಮೂ ಕಂತುಗಳ ಆದಾಯ:—ಈ ವರ್ಷದ ಎಲ್ಲಾ ವಿಮೂ ಕಂತುಗಳ ಆದಾಯವು (ಪುನಹ ಭರವಸೆ ಕೊಟ್ಟದ್ದನ್ನು ಬಿಟ್ಟು) ಕಳೆದ ವರ್ಷದ ವಿಮೂ ಕಂತಿನ ಆದಾಯಕ್ಕಿಂತ ಶೇಕಡ 55ರಷ್ಟು ಹೆಚ್ಚಿದೆ. ವರದಿ ವರ್ಷದ ವಿಮೂ ಕಂತಿನ ಆದಾಯವು ರೂ. 3,66,198-13-0, ಗತ ವರ್ಷದ್ದು 2,36,767-6-6 ಆಗಿದೆ.

ಜೀವ ವಿಮೂ ಫಂಡು:—ಈ ಕಂಪೆನಿಯ ಜೀವ ವಿಮೂ ಫಂಡು ರೂ. 75,258-14-9ರಿಂದ, ವ್ಯವಸ್ಥಾ ಕ್ರಮಕ್ಕೆ ಮತ್ತು ಇತರ ಖರ್ಚಿಗಾಗಿ ರೂ. 45,037-8-4 ವಜಾ ಕಳೆದು ರೂ. 21,00,421-1-3ಕ್ಕೆ ಏರಿದೆ. ಈ ಕೆಳಗೆ ಅವರ ತಪಶೀಲನ್ನು ಕೊಡಲಾಗಿದೆ.

ವರ್ಷಾಂತ್ಯದಲ್ಲಿ.		ವಿಮೂ ಕಂತು.		ಜೀವ ವಿಮೂ ಫಂಡು.
1ನೇ ವರ್ಷದ	ರೂ.	1,46,949	ರೂ.	15,619
2ನೇ ವರ್ಷದ	,,	2,36,767	,,	75,259
3ನೇ ವರ್ಷದ	,,	3,66,199	,,	2,00,421

ಈ ಮೇಲಿನ ಅಂಕೆ ಸಂಖ್ಯೆಗಳೇ ಕಂಪೆನಿಯ ಅಭಿವೃದ್ಧಿಗೆ ನಿದರ್ಶನವಾಗಿವೆ. ಈ ಅಭಿವೃದ್ಧಿಯು ಭಾರತ ವಿಮೂ ಕಂಪೆನಿಗಳ ವಾರ್ಷಿಕ ವೃತ್ತಾಂತದಲ್ಲಿ ಹೊಗಳಲರ್ಹವಾದದ್ದೇ ಆಗಿದೆ.

ಭಾರತ ಜೀವವಿಮೂ ಕಂಪೆನಿಗಳ ಆಕ್ಟಿನ ಮೇರೆ ತೇವಣಾತಿ:—ಈ ಖಾನೂನು ಮೇರೆ ತೇವಣಾತಿ ಮಾಡತಕ್ಕದ್ದಿದ್ದ ರೂ, 2 ಲಕ್ಷವನ್ನು ಪೂರ್ತಿಯೊಗಿ ಡಿಪಾಜಿಟ್ಟು ಮಾಡಲಾಗಿದೆ ಎಂಬುವುದನ್ನು ತಿಳಿಸಲು ಡೈರೆಕ್ಟರುಗಳು ಸಂತೋಷವುಳ್ಳವರಾಗಿರುವರು.

ಪಿ. ಯಂ. ತಿಮ್ಮಯ್ಯ,
(52-27) ಏಜೆನ್ಸಿಗಳ ಇನ್ಸ್‌ಪೆಕ್ಟರು, ಕೊಡಗು ಮತ್ತು ಹಾಸನ ಡಿಸ್ಟ್ರಿಕ್ಟ್.

ಧಾತುಪುಷ್ಟಿ ಲೇಹ:

(ಸುವರ್ಣ, ಸಾಲಾಮಿಶ್ರಿ, ಕಲ್ಮದ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ಶಕ್ತಿವರ್ಧಕ ರಸಾಯನ, ಸ್ವಪ್ನಾನಷ್ಟ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ ಇವುಗಳನ್ನು ಹೋಗಲಾಡಿಸಿ, ಹೆಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನು ಉಂಟುಮಾಡುತ್ತದೆ.

ಬಾಟ್ಲಿ 1ರ ರೂ. 2—8—0.

ಮಲೇರಿಯಾನಿವಾರಿಣಿ.

ಇದು ಚಳಿ ಜ್ವರ, ಚಾತುರ್ಥಿ ಜ್ವರ, ದಿನ ಬಿಟ್ಟುಬರುವ ಜ್ವರ, ಮಲೇರಿಯಾ ಜ್ವರ, ಇನ್‌ಫ್ಲುಯೆಂಜಾ ಇತ್ಯಾದಿ ನಾನಾ ತರದ ಜ್ವರಗಳ ಮೇಲೆ ರಾಮಬಾಣ.

ಬಾಟ್ಲಿ 1ರ ರೂ. 1—8—0; ಸಣ್ಣ ಬಟ್ಲಿ ರೂ. 0—13—0.

ಸ್ಪ್ಲೀನ್ ಮಿಕ್ಷ್ಚರ್.

ಜ್ವರಗೆಡ್ಡೆ, ಆಗಾಗ ಜ್ವರ ಬರುವಿಕೆ, ಪಿತ್ತವಿಕಾರ, ಅರುಚಿ, ಅಗ್ನಿಮಾಂದ್ಯ, ಅಶಕ್ತತೆ, ಮಲಬದ್ಧತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿಯನ್ನು ಉಂಟುಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ.

ಮಕ್ಕಳಜೀರ್ಷ್ಟ, ಕಫ, ಕೆಮ್ಮು, ಉಬ್ಬಸ, ಮಲಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಜ್ವರ, ಮೂರ್ಛೆ ಇವುಗಳಿಗೆಲ್ಲಾ ರಾಮಬಾಣ. ಬಾಟ್ಲಿ 1ರ 0—10—0.

ಎಲ್ಲಾ ನಮೂನೆಯ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ಬರೆಯಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು.

ಎಮ್. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್, ರಥ ಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ:—(1) ಮಂಗಳೂರು ಸ್ಟೋರ್ಸ್, ಮಡಿಕೇರಿ. (2) ವಿ. ಬಿ. ಕಾಮತ್, ಮಡಿಕೇರಿ. (3) ಬಿ. ಪುಟ್ಟಯ್ಯ ಕೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. (4) ಎ. ಎಸ್. ಪೂಚಯ್ಯ, ಸುಂಟಿಕೊಪ್ಪ. (5) ಸುಂದರ ಪ್ರಭು, ಸುಳ್ಯ. (6) ಸೊರ್ಗ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರರಾಜೇಂದ್ರಪೇಟೆ. (7) ಎ. ಎನ್. ಪುಟ್ಟಯ್ಯ, ಗೋಣಿಕೊಪ್ಪಲು. [18]

ಡಾ. ಕೆ. ಕೆ. ನಂಬಿಯಾರ್,
ಇವರ

ದಂತಚಿಕಿತ್ಸಾಲಯವನ್ನು ಸ್ಥಾಪಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ಅಖಿಲ ಕೊಡಗು ಸಹಕಾರ ಸಮ್ಮೇಳನ.

ಅಧ್ಯಕ್ಷರಾದ ಶ್ರೀಮಾನ್ ಎ. ಕೆ. ಯಜ್ಞನಾರಾಯಣ ಐಯ್ಯರ್, ಯಂ. ಎ., ಯವರ ಭಾಷಣ.

ಅಖಿಲ ಕೊಡಗು ಕೊ ಆಪರೇಟಿವ್ ಮಹಾ ಸಭೆಯ ದಶಮ ವಾರ್ಷಿಕೋತ್ಸವದ ಸಮಾರಂಭ ನೂಡಲು ನನ್ನನ್ನು ಆಹ್ವಾನಿಸಿರುವುದರಿಂದ ನಾನು ಬಹುವಾಗಿ ಸನ್ಮಾನಿತನಾಗಿರುವೆನು. ಈ ಮರ್ಯಾದೆಯನ್ನು ನಾನು ಬಹುವಾಗಿ ಶ್ಲಾಘಿಸಿರುತ್ತೇನೆ ಮಾತ್ರವಲ್ಲದೆ ಈ ಪ್ರೀತಿ ಪುರಸ್ಸರ ಆಹ್ವಾನಕ್ಕಾಗಿ ವಂದಿಸುತ್ತೇನೆ. ಇಂಥಾ ಸುಸಂದರ್ಭದಲ್ಲಿ ಅಧ್ಯಕ್ಷರಾಗಿರುವವರಿಗೆ ಇರಬೇಕಾದ ದಕ್ಷತೆಯು ನನ್ನಲ್ಲಿ ಇಲ್ಲವೆಂದು ನನಗೇ ಗೊತ್ತಿದೆ ಮತ್ತು ಈ ಆಹ್ವಾನಕ್ಕೆ ಒಪ್ಪಿರುವುದಕ್ಕೆ ನಾನೇ ಆಧೀರನಾಗಿರುತ್ತೇನೆ. ಸಹಕಾರವಲ್ಲೀ ಒಡನಾಡಿ ಆಸೀನು ನೈಪುಣ್ಯತೆಯನ್ನು ಪಡೆದ ಅನೇಕರು ಈ ಮುಂಚೆ ಈ ಅಧ್ಯಕ್ಷತನವನ್ನು ಅಲಂಕರಿಸಿರುತ್ತಾರೆ. ಆ ನೈಪುಣ್ಯತೆಯು ನನಗಿದೆಯೆಂದು ನಾನು ಹೇಳಲಾರೆ. ಆದರೂ, ಸಹಕಾರ ಚಳವಳದಲ್ಲಿ ಆಸಕ್ತಿಯು ನನಗೆ ಬಹುಕಾಲದಿಂದ ಇದೆಯೆಂದೂ, ಕೆಲವು ಶ್ರದ್ಧೋನ್ನತ್ತ ವ್ಯಕ್ತಿಗಳ ಸಂಗಡ 'ಬೆಂಗಳೂರು ಸಿಟಿ ಕೊ-ಆಪರೇಟಿವ್ ಸೊಸೈಟಿ'ಯೆಂಬ ಸಂಘವನ್ನು ಮೈಸೂರು ಸಂಸ್ಥಾನಕ್ಕೇ ಮೊದಲನೆಯದಾಗಿ ಏರ್ಪಡಿಸುವ ವಿಶೇಷಾಧಿಕಾರವು ನನಗೆ ಇತ್ತೆಂಬುದು ನನ್ನ ಜ್ಞಾಪಕಕ್ಕೆ ಬರುತ್ತದೆಂದೂ ಸಹ ಹೇಳಬಲ್ಲೆನು.

ವ್ಯವಸಾಯವನ್ನವಲಂಬಿಸಿ ಇರುವ ಹಳ್ಳಿಗಳ ದುಃಸ್ಥಿತಿಯನ್ನು ಕಡಿಮೆ ಮಾಡಲು ಸಹಕಾರ ಇಲಾಖೆಗೂ ವ್ಯವಸಾಯ ಇಲಾಖೆಗೂ ಇರುವ ಅತಿ ಹತ್ತಿರವಾದ ಸಂಬಂಧವನ್ನು ನೀವು ಮನಸ್ಸಿಗೆ ಹಚ್ಚಿಕೊಂಡಿರುತ್ತೀರೆಂಬುದಕ್ಕೆ ನನ್ನ ಆಹ್ವಾನವೇ ನಿದರ್ಶನವೆಂದು ಭಾವಿಸುತ್ತೇನೆ. ಈ ಭಾವನೆಯಿಂದ ಈ ಸನ್ಮಾನವನ್ನು ನಾನು ಸ್ವೀಕರಿಸುತ್ತೇನೆ.

ಕಳೆದ ಕೆಲವು ವರ್ಷಗಳಿಂದ ಸಹಕಾರ ಸಂಘಗಳಿಗೆ ಬಿದ್ದಿರುವ ದುಃಸ್ಥಿತಿಯನ್ನು ನೋಡಿದರೆ ನಿಮ್ಮ ದೇಶದಲ್ಲಿರುವ ಸಹಕಾರ ಸಂಘಗಳು ಕಳೆದ ವರ್ಷ ಒಟ್ಟಾರೆ ತೃಪ್ತಿಕರವಾಗಿಯೂ, ಸಫಲವಾಗಿಯೂ ಕೆಲಸ ನಡೆಸಿರುತ್ತವೆಂಬುವಕ್ಕೆ ನಿಮಗೆ ಪ್ರಥಮತಃ ಅಭಿನಂದಿಸುತ್ತೇನೆ. ಇದು ಸಾಧಾರಣ ಸಿಪಾರಸ್ಸಾಗಲಿಲ್ಲ,-ಏಕೆಂದರೆ ಈ ದೇಶದ ವಿಸ್ತಾರ ಅಥವ ಜನಸಂಖ್ಯೆಯಷ್ಟನ್ನೇ ಬೇರೆ ದೇಶದ ವಿಸ್ತಾರ ಮತ್ತು ಜನಸಂಖ್ಯೆಗೆ ಹೋಲಿಸಿದರೆ ಅಲ್ಲಿರುವ ಸಹಕಾರ ಸಂಘಗಳ ಸಂಖ್ಯೆ ಅಥವ ವರ್ಗಗಳಿಗಿಂತ ನಿಮ್ಮ ಸಹಕಾರ ಸಂಘಗಳೇ ಅಧಿಕವಾಗಿವೆ. ವ್ಯವಸಾಯದಲ್ಲಿರುವ 1 ಲಕ್ಷದ ಮೂವತ್ತು ಸಾವಿರ ಏಕ್ರೆಗಿಂತ ಸ್ವಲ್ಪ ಹೆಚ್ಚಿನ ಭೂವಿಸ್ತಾರಕ್ಕೂ, ಸುಮಾರು ಒಂದು ಲಕ್ಷದ ಆರ್ವತ್ತು ಸಾವಿರ ಜನಸಂಖ್ಯೆಗೂ ನಿಮ್ಮ ಸಂಘಗಳು 310 ಇವೆ. ಈ ಸಂಘಗಳು ಪ್ರಯೋಜನ ಕೊಡುವ ಹಳ್ಳಿಗಳ ಸಂಖ್ಯೆಯನ್ನು ವಿಚಾರಿಸಿದರೆ ಇವು ಒಂದು ಹಳ್ಳಿಗೆ ಒಂದು ಸಂಘವಿದ್ದಂತಾಯಿತು. ಬರಿಯ ಸಂಖ್ಯೆಯನ್ನು ತೆಗೆದುಕೊಂಡರೂ ನಿಮ್ಮ ಕರ್ತವ್ಯದ ಭಾರವು ದೊಡ್ಡದಾಗಿದೆ. ಈ ಸಂಘಗಳು ಯಾವ ವರ್ಗಕ್ಕೆ ಸೇರಿಸಲ್ಪಟ್ಟಿವೆಯೆಂಬುದನ್ನು ನೋಡಿದರೂ ವಿಷಯವು ಆಶ್ಚರ್ಯಜನಕವಾಗುತ್ತದೆ. ವ್ಯಾಪಕ ದುದಯಿಂದ ನೋಡುತ್ತ ಬಂದರೆ, ಸಾಲ ಕೊಡುವ ಮುಖ್ಯ ಸಂಸ್ಥಾಪನೆಯಾಗಿರುವ ಸೆಂಟ್ರಲ್ ಬ್ಯಾಂಕು ಇದೆ,-ನಂತರ ಮೇಲ್ವಿಚಾರಣಾ ಯೂನಿಯನ್‌ಗಳಿವೆ,-ನಂತರ ಹಳ್ಳಿಯ ಸಾಲ ಕೊಡುವ ಸಂಘಗಳೂ, ಬೇವ್ಯವಸಾಯ ಸಂಘಗಳೂ, ದವಸ ಭಂಡಾರಗಳೂ, ಬೆಳೆ ಮಾರಾಟ ಮತ್ತು ಸಾಲ ಕೊಡುವ ಸಂಘಗಳು, ಜಿಸನು ಸಂಘಗಳು, ಲಂತಾನ ನಾಶಕ ಸಂಘಗಳು, ಮೆಲೇರಿಯಾ ನಾಶನ ಸಂಘಗಳು, ಹಾಲು ಸರಬರಾಯಿಯ ಸಂಘಗಳು, ಜೇನು ಮತ್ತು ಮೇಣ ಸಂಘ ಮತ್ತು ಉತ್ತಮ ಜೀವನ ಸಂಘಗಳೂ ಇವೆ. ಇಷ್ಟು ನಮೂನೆಯ ಸಂಘಗಳ ಡಿಪಾರ್ಟ್‌ಮೆಂಟಿನ ಉದ್ಯೋಗಸ್ಥರಲ್ಲೂ, ಎಲ್ಲ ಸಂಘಗಳ ಮೇಲ್ವಿಚಾರಣಾ ಕಮಿಟಿಗಳಲ್ಲೂ ಅಸಾಮಾನ್ಯ ಕರ್ತವ್ಯ ನಿಷ್ಠತೆ, ಚಾತುರ್ಯ, ಬುದ್ಧಿ ಮತ್ತು ವ್ಯಾಪಾರ ಕುಶಲತೆಗಳಿರಬೇಕಾಗುವಂತೆ ಮೂಡುತ್ತವೆ. ವಿವಿಧ ನಮೂನೆಯ ಇಷ್ಟು ಸಂಘಗಳ ಆಡಳಿತೆಗೆ ಪ್ರತಿ ಹಳ್ಳಿಯಲ್ಲೂ ಕೂಡ ಮಹನೀಯರಿರುತ್ತಾರೆಂಬುದು ಆಶ್ಚರ್ಯಕರವಾದ ಸಂಗತಿಯೇ ಸರಿ. ಏಕೆಂದರೆ, ಹಳ್ಳಿಗಳಲ್ಲಿ ದಕ್ಷತೆಯಿಂದ ಸಂಘಗಳ ಆಡಳಿತೆ ನೋಡುವವರ ಅಭಾವವಿರುವುದೇ ಸಹಕಾರ ಚಳವಳಿಗೆ ಪ್ರತಿಬಂಧಕವಾಗಿದೆ. ಈ ಪರಿಸ್ಥಿತಿಯಲ್ಲಿ ಒಂದು ವರ್ಷದಲ್ಲಿ ಸಾಧಾರಣ ಪುಟ್ಟನ ಜಯಂತಾಲಿಯಾಗುವುದಾದರೂ ಅಭಿನಂದನೀಯ ವಿಷಯವೆಂದೇ ಹೇಳಬೇಕು.

ಬೆಳೆಗಳ ಧಾರಣೆಯು ಮತ್ತು ಸಹಕಾರ ಮಾರಾಟದ ಸಮಸ್ಯೆ.

ಅನೇಕ ನಿಮ್ಮ ವರದಿಗಳಲ್ಲಿರುವ ಪ್ರಾಮುಖ್ಯ ವಿಷಯವು ಯಾವುದಾಗಿದೆಯೆಂದರೆ, ಧಾರಣೆವಾಸಿಗಳು ಇಳಿದಿರುವುದರಿಂದ ವಾಯಿದೆ ಮೊರಿದ ಸಾಲಗಳು ಹೆಚ್ಚಾಗಿವೆಯೆಂಬುದೂ, ಮುಂದಿನ ಸಾಲಗಳಿಗೆ ಮೂಲ ಧನವು ಕಡಿಮೆಯೊಗುತ್ತಿದೆಯೆಂಬುದೂ, ಗ್ರಾಮಗಳಲ್ಲಿ ಜೀವನ ಕಷ್ಟಗಳು ಹೆಚ್ಚಾಗುತ್ತಿವೆಯೆಂಬುದೂ ಆಗಿದೆ. ಹೆಚ್ಚು ಕಡಿಮೆ ಕಳೆದ ಹತ್ತು ವರ್ಷಗಳಿಂದಲೂ ಧಾರಣೆವಾಸಿಗಳ ಸಮಸ್ಯೆಯು ನಿಗೂಢವಾಗಿದ್ದು ಲೋಕದ ಅತಿ ಬುದ್ಧಿವಂತ ಅರ್ಥ ಶಾಸ್ತ್ರಜ್ಞರು ಇದರ ಕಾರಣಗಳಿಗೆ ಭಿನ್ನಾಭಿಪ್ರಾಯಗಳನ್ನು ಕೊಟ್ಟಿರುತ್ತಾರೆ.

ನಿಮಗೆ ಗೊತ್ತಿದ್ದಂತೆ, ಒಂದು ಸರಕಾರವು ಇದು ವರೆಗೂ ಮಾಡದ ರೀತಿಯ ವ್ಯವಸ್ಥೆಗಳಿಂದ ಅಮೇರಿಕದ ಯುನೈಟೆಡ್ ಸ್ಟೇಟ್ಸ್ ರಾಜ್ಯವು ವಿವಿಧ ರೀತಿಗಳಿಂದ ಫಸಲಿನ ಧಾರಣೆವಾಸಿಗಳನ್ನು ಏರಿಸಬೇಕೆಂದು ಭೀಮಪ್ರಯತ್ನಗಳನ್ನು ಮಾಡಿದರು. ಅಮೇರಿಕದ ಅರ್ಥ ಶಾಸ್ತ್ರಜ್ಞರೆಂದು ಕರೆಯಲ್ಪಡುವವರು ಈ ಸಮಸ್ಯೆಯನ್ನು ಕುರಿತು ಕಂಡ ಪ್ರತಿಯೊಂದು ದೃಷ್ಟಿಯಿಂದ ಆಕ್ರಮಿಸಿದರೂ ಪುನಃ ಪುನಃ ನಿರರ್ಥಕರಾಗಿರುತ್ತಾರೆ. ಯಾವಾಗ, ಹೇಗೆ, ಬೆಳೆ ಫಸಲಿಗೆ ಧಾರಣೆವಾಸಿಗಳು ಏರುತ್ತವೆಂದು ಹೇಳುವುದು ಅಸಾಧ್ಯವಾಗಿದೆ,-ಇನ್ನು ಮುಂದೆ ಒಳ್ಳೆಯ ಕಾಲ ಬಂದೀತೆಂದು ಅಧೀರ ಭವಿಷ್ಯವನ್ನು ಹೇಳುವುದು ಮಾತ್ರ ಸಾಮಾನ್ಯವಾಗಿ ಕಾಣುತ್ತಿದೆ. ಆದುದರಿಂದ, ಈಗಿನ ಧಾರಣೆ ಮಟ್ಟದಲ್ಲಿ ಹೆಚ್ಚಿನ ಪ್ರಯೋಜನ ಸಿಕ್ಕಿ, ಸಹಕಾರ ಮೂರಾಟದ ಅನುಭವಸಿದ್ಧ ರೀತಿಗಳಿಂದ ರೈತರಿಗೆ ಗಿರಾಕಿಗಳಿಂದ ಹೆಚ್ಚಿನ ಧಾರಣೆ ಸಿಕ್ಕುವಂತೆ ಮೂಡುವಷ್ಟಕ್ಕೆ ಮಾತ್ರ ನಮ್ಮ ಚಳವಳವಿರಬೇಕಾಗಿದೆ. ವ್ಯಾಪಾರ ಮತ್ತು ದಳ್ಳಾಳಿಗಳಿಗೆ ಸಿಕ್ಕುವ ಲಾಭವು ಎಷ್ಟರ ಮಟ್ಟಗೆ ರೈತರಿಗೆ ಸಿಕ್ಕಲು ಸಾಧ್ಯವೊಡಬಹುದೆಂಬ ವಿಷಯವೂ, ಯಾವ ಯಾವ ಜಾತಿಯ ಸರಕುಗಳ ವ್ಯಾಪಾರವನ್ನು ಹಾಗೆ ಮೂಡಬಹುದೆಂಬ ವಿಷಯವೂ ಬೇರೆ ಬೇರೆ ಸರಕಾರಗಳ ಪರವಾಗಿ ಸವಿಸ್ತಾರವಾಗಿ ವಿಚಾರಿಸಲ್ಪಡುತ್ತಿವೆ.

ಫಸಲು, ಸಾಲ ಮತ್ತು ಮೂರಾಟದ ಸಂಘಗಳು.

ಸಹಕಾರ ಮೂರಾಟದ ಪ್ರತಿಯೊಂದು ಬಾಬನ್ನು ವಿವರಿಸದೆ, ಫಸಲು ಮೂರಾಟವನ್ನು ಹಂಗಾಮಿಯಲ್ಲಿ ನಿಲ್ಲಿಸುವುದರ ಮುಖ್ಯ ಲಾಭವನ್ನು ನಾವು ಒತ್ತಿ ಹೇಳಬಹುದು. ಕೈಲಿನ ಸಮಯದ ಕ್ರಯಗಳಿಗೂ ನಂತರದ ಕ್ರಯಗಳಿಗೂ ಇರುವ ವ್ಯತ್ಯಾಸವೂ, ರೈತನು ಹಣದ ಅಭಾವದಿಂದ ಕೈಲಾದ ಕೂಡಲೆ ಫಸಲನ್ನು ಮಾರಲು ಬಿಡದೆ ಕೊ-ಆಪರೇಟಿವ್ ಸಂಘಗಳ ಮೂಲಕ ಅವಶ್ಯಹಣದ ಅಡಚಣೆ ತೆಗೆದು ಧಾರಣೆ ಬಂದಾಗ ಮಾರುವಂತೆ ಅನುಕೂಲಿಸುವುದೂ ಬಹು ಲಾಭದಾಯಕವಾಗಿದೆ. ಏಕೆಂದರೆ ಧಾರಣೆಗಳ ವ್ಯತ್ಯಾಸವು ಬಹುವಾಗಿರುತ್ತದೆ.

ಫಸಲಿನ ಮೇಲೆ ಸಾಲವನ್ನು ಕೊಡುವುದು, ದಾಸ್ತಾನಿಗೆ ಪತ್ತಾಯಗಳನ್ನು ಕಟ್ಟುವುದು, ಮುಂತಾದ ಅನುಕೂಲತೆಗಳನ್ನು ಕೊಟ್ಟು ರೈತನು ಫಸಲನ್ನು ಮಾರದಂತೆ ಮೂಡಿದರೆ ಕ್ರಯದಲ್ಲಿ ಸಿಕ್ಕುವ ಈಗಿನ ಲಾಭವು ವರ್ತಕನಿಗೆ ಹೋಗುವುದರ ಬದಲು ರೈತನಿಗೇ ಸಿಕ್ಕುತ್ತದೆ. ಮಾರಾಟಕ್ಕೆ ಕಳುಹಿಸುವುದರಲ್ಲಿ ಉಂಟಾಗುವ ಅನಿವಾರ್ಯ ಖರ್ಚುಗಳನ್ನು ಸಹ ಕಡಿಮೆ ಮಾಡಿ, ಹೆಚ್ಚಿನ ವಿಷಯದ ಕಮಿಷನು ಸೊಸೈಟಿಗೂ ನಂತರ ಮೆಂಬರುಗಳಿಗೂ ಸಿಕ್ಕುವಂತಾಗುತ್ತದೆ.

ಸಮಾಜಾಭ್ಯುದಯ ಸಂಘಗಳು.

ಲಂತಾನ ನಾಶಕ ಮತ್ತು ಉತ್ತಮ ಜೀವನ ಸಂಘಗಳು.

ನಿಮ್ಮ ಸಂಘಗಳ ಪೈಕಿ ಹೆಚ್ಚಿನವು ಮೆಂಬರರ ಉತ್ಪತ್ತಿಯನ್ನು ಹೆಚ್ಚಿಸುವಂಥವೂ, ಸಾಲವನ್ನು ಕಡಿಮೆ ಮಾಡುವಂಥವೂ, ಮನೆಯ ಅವಶ್ಯಕತೆಗಳನ್ನು ಕಡಿಮೆ ಕ್ರಯಕ್ಕೆ ಕೊಡುವಂಥವೂ, ಒಟ್ಟಾರೆಯಾಗಿ, ಲೌಕಿಕ ಅವಶ್ಯಕತೆಗಳನ್ನು ಹೆಚ್ಚಿಸುವಂಥವೂ ಆಗಿವೆಯೋ, ಎಲ್ಲರ ಒಳ್ಳೆಯದಕ್ಕಾಗಿ ಕೆಲಸ ಮಾಡುವ ಇಚ್ಛೆಯೆಂಬ ಈ ಲೋಚಿಸಲಸಾಧ್ಯವಾದ ಶಕ್ತಿಯನ್ನು ಪ್ರಯೋಜನಕ್ಕೆ ಹಾಕಲು ಪ್ರಯತ್ನಿಸುತ್ತಿರುವ ಸಂಘಗಳನ್ನೂ ನೋಡಿ ನನಗೆ ಸಂತೋಷವಾಯಿತು. ಹಳ್ಳಿಗಳಲ್ಲಿ ಹಣವು ಕಡಿಮೆಯಾಗಿದ್ದೀತು ಆದರೆ ಜನಶಕ್ತಿಯು ಯಥೇಚ್ಛವಾಗಿದೆ. ಸಹಕಾರಕ್ಕೆ ಉದ್ಯಮವನ್ನು ಗಂಟು ಹಾಕಿದರೆ ಹಣಕ್ಕೂ ಸಹ ಅಸಾಧ್ಯವಾಗಿರುವ ಕೆಲಸವನ್ನು ಉದ್ಯಮವು ಮಾಡಬಲ್ಲುದಾಗಿರುವುದರಿಂದ ಹಣವ ರೂಪದಲ್ಲಿ ಪತ್ತು ಬರದಿದ್ದರೂ ಉದ್ಯಮರೂಪದಲ್ಲಿ ಬಂದೇ ತೀರುವುದು. ಈ ವಿಷಯದಲ್ಲಿ ನಿಮ್ಮ ಲಂತಾನ ನಾಶಕ ಸಂಘಗಳು ಮಾದರಿಯಾಗಿವೆ. ಇವುಗಳಲ್ಲಿ ಕೆಲವರಲ್ಲಿ ಸೋಮೂರಿತನವು ಸೇರಿಕೊಂಡಿರುವುದಾದರೂ, ಬರಿಯ ಶರೀರ ಶಕ್ತಿ ಮತ್ತು ಸಮಾಜದ ಶ್ರೇಯಸ್ಸನ್ನೇ ತಮ್ಮ ಮೂಲ ಧನವಾಗಿ ಇಟ್ಟುಕೊಂಡು ಮಾಡಿದ ಒಳ್ಳೆಯ ಕೆಲಸವನ್ನು ನಾನು ಸಾಕಷ್ಟು ನೋಡಿ ಮೆಚ್ಚಿರುತ್ತೇನೆ.

ಸ್ನಾನಮಾಡುವುದಕ್ಕೂ, ಬಟ್ಟೆ ಒಗೆಯುವುದಕ್ಕೂ, ನಿಮ್ಮ ಮನೆ ಬಾಗಿಲು ಗುಡಿಸುವುದಕ್ಕೂ, ಗಾಳಿಗೆ ನಿಮ್ಮ ಹಾಸಿಗೆ ಹಾಕುವುದಕ್ಕೂ, ಕಿಟಿಕಿ ತೆರೆಯುವುದಕ್ಕೂ, ಅಥವ ನಿಮ್ಮ ಪಾತ್ರೆಗಳನ್ನು ಜೊಕ್ಕಟ ಪಡಿಸುವುದಕ್ಕೂ ಹಣ ಬೇಕಾಗಿಲ್ಲ. ಮತ್ತು ಮನಸ್ಸಿದ್ದರೆ ನಿಮ್ಮ ಹಳ್ಳಿಯ ರಸ್ತೆಯನ್ನು ನೆಟ್ಟಗೆ ಮಾಡುವುದಕ್ಕೂ, ಕಚ್ಚಡವನ್ನು ದೂರಕ್ಕೆ ಸಾಗಿಸುವುದಕ್ಕೂ, ಗುಂಡಿಗಳನ್ನೂ ಕೊರಕಲನ್ನೂ ಮುಚ್ಚುವುದಕ್ಕೂ, ಹಬ್ಬಿಕೊಳ್ಳುತ್ತಿರುವ ಲಂತಾನವನ್ನು ಕತ್ತರಿಸುವುದಕ್ಕೂ ಹಣ ಬೇಕಾಗಿಲ್ಲ. ಟೀಕಾನುರಕ್ತರು ಕಾಣುವಂತೆ ಉದ್ಯೋಗಸ್ಥರ ಬೆಂಬಲವೂ ಬಲಾತ್ಕಾರವೂ ಇರಬಹುದಾದರೂ, ಪರಿಣಾಮವು ಒಳ್ಳೆಯದೂ ಸ್ಥಿರವಾದುದೂ ಆಗಿದ್ದರೆ ಉದ್ಯೋಗಸ್ಥರು ಅವುಗಳಲ್ಲಿ ಕೈ ಹಾಕುವುದನ್ನು ನಿರೋಧಿಸಬೇಕಾಗಿಲ್ಲ.

ಸಮಾಪ್ತಿ.

ನಾನು ಸಹಕಾರ ಚಳವಳದಲ್ಲಿ ಆಸಕ್ತನಾಗಿರುವ ಒಬ್ಬ ಅಭ್ಯಾಗತನ ಅನುಭವವನ್ನು ಸಾಮಾನ್ಯವಾಗಿ ಹೇಳಿರುತ್ತೇನೆಯೇ ಹೊರತು ಸಹಕಾರದಲ್ಲಿ ಶ್ರೇಷ್ಠನು ರಿತವರು ಹೇಳಬಹುದಾದ ಗುಣದೋಷ ವಿಚಾರಗಳನ್ನಾಗಲಿ, ಅಮೂಲ್ಯ ಸೂಚನೆಗಳನ್ನಾಗಲಿ ನಾನು ಕೊಟ್ಟಿರುವುದಲ್ಲ. ಇಂಥಾ ಗಹನ ಮತ್ತು ಸಂಕೀರ್ಣ ಚಳವಳದ ಹಳ್ಳಿಗುಂಡಿಗಳನ್ನು ನಾನು ಅರಿಯದೆ ಇಲ್ಲವಾದರೂ ಈ ಚಿತ್ರದ ಆನಂದಕರ ಭಾಗವನ್ನೇ ವರ್ಣಿಸಿ ನೀವೂ ಈ ಆನಂದದಲ್ಲಿ ಭಾಗಿಗಳಾಗಲೆಂದು ಪ್ರಯತ್ನಿಸಿರುತ್ತೇನೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು.

ಕಾಂಗ್ರೆಸ್ ಸದಸ್ಯರ ಪಟ್ಟಿಗಳು ಪರಿತೀಲಿಸಲ್ಪಡಬೇಕು.
ರೂಪಾಯಿಯ ದರ ಇಳಿಸಲ್ಪಡಬೇಕು.

ಸರ್ಕಾರವು ಸಂಸ್ಥಾನದ ಚಳವಳವನ್ನಡಗಿಸಲು ಸಹಾಯ ಮಾಡಿದರೆ ಕಾಂಗ್ರೆಸು ಅವರ ಸಹಾಯಕ್ಕೆ ಬರಬೇಕು.

ಈ ಸಾರಿಯ ವರ್ಕಿಂಗ್ ಕಮಿಟಿಯ ಮೀಟಿಂಗು ಅತ್ಯಂತ ಮಹತ್ವದಿದ್ದಿತು. ಸಂಸ್ಥಾನಗಳ ಪ್ರಜೆಗಳ ಹೋರಾಟ, ನಾಣ್ಯ ವಿನಿಮಯ ದರ, ಕಾಂಗ್ರೆಸ್ಸಿನಲ್ಲಿಯ ಕೊಳೆಯನ್ನು ಹೋಗಲಾಡಿಸುವ ಇವೇ ಮೊದಲಾದ ಮಹತ್ವದ ವಿಷಯಗಳು ನಿಷ್ಕರ್ಶಿಸಲ್ಪಟ್ಟವು. ಠರಾವುಗಳನ್ನು ವಾಚಕರ ಅವಗಾಹನೆಗೆ ಕೊಡಲಾಗಿದೆ.

ಸಂಸ್ಥಾನಗಳ ವಿಚಾರ.

'ದೇಶದ ಬೇರೆ ಬೇರೆ ಭಾಗದಲ್ಲಿರುವ ಹಿಂದೀ ಸಂಸ್ಥಾನಗಳಲ್ಲಿನ ಜನರಲ್ಲಿ ಜಾಗೃತಿಯಾಗಿರುವದನ್ನು ವರ್ಕಿಂಗ್ ಕಮಿಟಿಯು ಸ್ವಾಗತಿಸುವದಲ್ಲದೆ, ಇದು ಮುಂದೆ ಸಂಸ್ಥಾನಗಳಲ್ಲಿನ ಜವಾಬ್ದಾರಿ ಸರ್ಕಾರಗಳನ್ನೊಳಗೊಂಡ ಭಾವೀ ಭಾರತ ಸ್ವಾತಂತ್ರ್ಯದ ಪೂರ್ವರಂಗವೆಂದು ಭಾವಿಸುತ್ತದೆ ಮತ್ತು ಸ್ವಾತಂತ್ರ್ಯಪಸಲುವಾಗಿ ನಡೆಯುತ್ತಿರುವ ಹೋರಾಟಗಳಿಗೆ ತನ್ನ ದೃಢವಾದ ಸಹೃದಯತೆಯನ್ನು ವ್ಯಕ್ತಪಡಿಸುತ್ತದೆ.'

'ಈ ಜಾಗೃತಿಯ ಪರಿಣಾಮವನ್ನು ಸರಿಸಿ ಕೆಲವು ಸಂಸ್ಥಾನಾಧೀಶ್ವರರು ಪ್ರಜೆಗಳೊಂದಿಗೆ ಸಹಕರಿಸಿ ಅವರ ಕೇಳಿಕೆಯನ್ನು ಮನ್ನಿಸುತ್ತಿರುವದನ್ನು ಕಮಿಟಿಯು ಮೆಚ್ಚಿರುವದು. ಆದರೆ ಕೆಲವು ಸಂಸ್ಥಾನಾಧೀಶ್ವರರು ಇದನ್ನು ಪ್ರತಿಬಂಧಿಸಿ 'ಕ್ರೂರ ಮತ್ತು ಅಮಾನುಷ ದಬ್ಬಾಳಿಕೆಗಳನ್ನು ನಡೆಸುತ್ತಿರುವದನ್ನು ನೋಡಿ ಈ ಕಮಿಟಿಯು ವಿಷಾಧಿಸುತ್ತದೆ. ಅಲ್ಲದೆ ಕೆಲವು ಸಂಸ್ಥಾನಾಧೀಶ್ವರರು ಜನತೆಯ ಕೋರಿಕೆಯನ್ನು ಸಲ್ಲಿಸದೆ ಅವರ ಚಳವಳವನ್ನಡಗಿಸಲು ಬ್ರಿಟಿಷ್ ಸರ್ಕಾರದ ಸಹಾಯ ಪಡೆಯಲೆತ್ನಿಸುವದನ್ನು ಈ ಕಮಿಟಿಯು ಖಂಡಿರುತ್ತದೆ. ಇಂಥಾ ಚಳವಳಗಳನ್ನು ನಿಲ್ಲಿಸಲು ಬ್ರಿಟಿಷ್ ಸರ್ಕಾರವು ಸಹಾಯ ಮಾಡಿದ್ದೇ ಆದರೆ ಪ್ರಜೆಗಳ ಸಂರಕ್ಷಣೆ ಮಾಡಲು ತನಗೂ ಅಧಿಕಾರ ವಿದೆಯೆಂಬುದನ್ನು ಕಾಂಗ್ರೆಸು ಸಾರಿ ಹೇಳುತ್ತದೆ.'

'ಸಂಸ್ಥಾನಗಳ ಬಗ್ಗೆ ಹರಿಪುರದಲ್ಲಾದ ಗೊತ್ತುವಳಿಯನ್ನು ಈ ಸಂಸ್ಥೆಯು ಪುಷ್ಟೀಕರಿಸಿ ಅದು ಅತ್ಯಂತ ಯೋಗ್ಯವಾದ್ದರಿಂದ ಮುಂದೆಯೂ ಇದು ಸಾಗಬೇಕು. ಜವಾಬ್ದಾರಿ ಸರ್ಕಾರಕ್ಕಾಗಿ ಸಂಸ್ಥಾನಗಳಲ್ಲಿ ನಡೆಯುತ್ತಿರುವ ಚಳವಳಿಯನ್ನು ಕಾಂಗ್ರೆಸ್ ಸ್ವಾಗತೀಕರಿಸಿದರೂ ಸಂಸ್ಥಾನಗಳಿಗೆ ಸಂಬಂಧಿಸದ ಜನರು ಸತ್ಯಾಗ್ರಹ ಮೊದಲಾದ ಚಟುವಟಿಕೆಗಳಲ್ಲಿ ಭಾಗ ತೆಗೆದುಕೊಳ್ಳುವದರಿಂದ ಪ್ರಜೆಗಳ ಚಳವಳಿಯು ಪ್ರಬಲವಾಗಲಾರದು ಮತ್ತು ಅವರಿಗೆ ತಮ್ಮ ಆತ್ಮ ಶಕ್ತಿಯ ಪರಿಮಿತಿ ತಿಳಿಯಲಾರದು'.

'ಎಲ್ಲಾ ಸಂಸ್ಥಾನಗಳ ಚಳವಳಿಗಳೂ ಕಾಂಗ್ರೆಸಿನ ಅಹಿಂಸಾ ಧೋರಣವನ್ನು ಅನುಲಂಬಿಸಿ ನಡೆಯುವದೆಂದು ಈ ಕಮಿಟಿಯು ನಂಬುತ್ತದೆ.'

ಕಾಂಗ್ರೆಸ್ ಶುದ್ಧೀಕರಣ ಸಮಸ್ಯೆ.

'ಕಾಂಗ್ರೆಸ್ಸಿನ ಅಂತರ್ಗತ ಆಡಳಿತೆಯಲ್ಲಿಯೂ, ಅಪ್ರಾಮಾಣಿಕ ನಡತೆ ಇರುವದೆಂದೂ ಅನೇಕ ಪ್ರಾಂತಗಳಿಂದ ವರ್ಕಿಂಗ್ ಕಮಿಟಿಗೆ ತಿಳಿದುಬಂದಿದೆ. ಇಂಥಾ ಖೋಟ ಸದಸ್ಯರನ್ನು ಮಾಡುವದು ಕೂಡಲೇ ನಿಲ್ಲಿಸಲ್ಪಡಬೇಕು. ಇದಕ್ಕಾಗಿ ಕಾಂಗ್ರೆಸ್ ಕಮಿಟಿಗಳ ರಿಜಿಸ್ಟರುಗಳನ್ನು ಪರಿತೀಲಿಸಿ ಅನರ್ಹರೆಂಬ ಕಂಡು ಬಂದ ಹೆಸರನ್ನು ರಿಜಿಸ್ಟರುಗಳಿಂದ ಕಿತ್ತೊಗೆಯಬೇಕೆಂದು ಕಮಿಟಿಯ ಖಂಡಿತ ಅಭಿಪ್ರಾಯವಿದೆ. ಕಾಂಗ್ರೆಸು ಲಕ್ಷ್ಯವಧಿ ಹಿಂದೀಯರಿಗೆ ಸ್ವಾತಂತ್ರ್ಯಗಳಿಸಿ ಕೊಡುವ ತನ್ನ ಉದಾತ್ತ ಧ್ಯೇಯದ ಬಗ್ಗೆ ಕೋಟ್ಯಾವಧಿ ಜನರಿಂದ ಸಾನುಭೂತಿಯನ್ನು ಸಂಪಾದಿಸುತ್ತಾ ಒಂದು ಹೋರಾಟದ ಸಂಸ್ಥೆಯೆಂದು ಮನವರಿಕೆ ಮಾಡಿ ಕೊಟ್ಟಿದೆ. ಈ ಯಶಸ್ಸನ್ನು ಕಾಂಗ್ರೆಸ್ಸಿನ ಶಿಸ್ತಿನ ಕಾರ್ಯ ಕರ್ತರಲ್ಲಲ್ಲದೆ ಪೊಳ್ಳು ಸದಸ್ಯತ್ವದಲ್ಲಿಲ್ಲ. ಆದರಿಂದ ಕಾಂಗ್ರೆಸ್ಸಿನ ಶ್ರೇಯಸ್ಸಿಗಾಗಿ ಪುನಹ ಕಾಂಗ್ರೆಸ್ ಸದಸ್ಯರ ಪಟ್ಟಿಯನ್ನು ಅನಲೋಕಿಸತಕ್ಕದ್ದು. ಎಲ್ಲಾ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳೂ ಈ ಕಾರ್ಯಕ್ಕೆ ಒಡನೇ ತೊಡಗಬೇಕೆಂದೂ, 1939ನೇ ವರ್ಷದ ಅಂತ್ಯದೊಳಗೆ ಈ ಕಾರ್ಯವನ್ನು ಮುಗಿಸಿ ಎ. ಐ. ಸಿ. ಸಿ. ಗೆ ವರದಿ ಒಪ್ಪಿಸಬೇಕೆಂದೂ ಅಭಿಪ್ರಾಯ ಪಡುತ್ತದೆ.'

'ಇನ್ನು ಕಾಂಗ್ರೆಸ್ ಸಂಸ್ಥೆಯು ಹೆಚ್ಚು ಬಲಶಾಲಿಯಾಗಬೇಕಾದರೆ ಅನರ್ಹ ಸದಸ್ಯರು ಸೇರದಂತೆ ಅದರ ಘಟನೆ, ನಿಯಮ ಮೊದಲಾದುವುಗಳಲ್ಲಿ ತಿದ್ದುಪಡಿಯಾಗಬೇಕು. ಕಾಂಗ್ರೆಸ್ ಪ್ರತಿನಿಧಿಗಳಾಗಿ ಇಚ್ಛಿಸುವವರ ವಿಷಯದಲ್ಲಿ ಕಾಂಗ್ರೆಸ್ ಘಟನೆಯ 5ನೇ ಕಲಮಿನನ್ವಯ ಸದಾ ಪ್ರಾಧಿಕಾರಿಯಾಗಬೇಕೆಂಬ ನಿರ್ಣಯದ ಜೊತೆಗೆ ಪ್ರತಿನಿಧಿ ಆಯ್ಕೆಗಿಂತ ಮೊದಲು ಆತನು ಮೂರು ವರ್ಷಗಳಿಗಿಂತ ಕಾಂಗ್ರೆಸ್ ಸದಸ್ಯನಿರಬೇಕು ಮತ್ತು ಸ್ವತಹ 5 ಸಾವಿರ ಯಾರ್ಡು ನೂಲುವದು ಅಥವಾ ಪ್ರಾಂತೀಕ ಕಮಿಟಿಯವರು ಗೊತ್ತುಪಡಿಸಿ ಮತ್ತಾವ ಕೆಲಸವನ್ನು ಮಾಡಿರಬೇಕು.'

ತ್ರಿಪುರಿ ಕಾಂಗ್ರೆಸ್ ಸಿದ್ಧತೆ

ಪೂರ್ವ ಸಿದ್ಧತೆಗಳು.

'ಕೆಲವು ವರ್ಷಗಳಿಂದ ಕಾಂಗ್ರೆಸ್ ಅಧಿವೇಶನವು ಗ್ರಾಮಗಳಲ್ಲಿ ಆಗುತ್ತಿರುವದು ಎಲ್ಲರಿಗೂ ವಿದಿತವಿರುವ ವಿಚಾರ. ಕಳೆದ ವರ್ಷ ಹರಿಪುರದಲ್ಲಿ ನಡೆದ ಅಧಿವೇಶನವು ಹಿಂದಿನ ಅಧಿವೇಶನಗಳನ್ನೆಲ್ಲಾ ಮುಂಕುಗೊಳಿಸಿತೆಂದು ನಾವು ತಿಳಿದಿರುವೆವು. ಹೀಗೆ ವರ್ಷ ವರ್ಷವೂ ಅಮೋಘವಾಗಿ ಅಭಿವೃದ್ಧಿಗೊಂಡು ನಡೆಯುತ್ತಿರುವ ಕಾಂಗ್ರೆಸ್ಸಿನ ಈ ವರ್ಷದ ಅಧಿವೇಶನವು ಮಹಾ ಕೋಸಲಕ್ಕೆ ಸೇರಿದ ತ್ರಿಪುರಿ ಎಂಬಲ್ಲಿ ಬರುವ ಮಾರ್ಚ್ ತಾ. 10, 11 ಮತ್ತು 12ರಲ್ಲಿ ಜರಗಲಿರುವದು. ಅದಕ್ಕೆ ಬೇಕಾದ ಎಲ್ಲಾ ಸಲಕರಣೆಗಳೂ ಸಿದ್ಧಗೊಳಿಸಲ್ಪಡುತ್ತಿವೆ.

ಸ್ಥಳ ಮತ್ತು ನೀರು.

ಹರಿಪುರದಂತೆಯೇ ಈ ವರ್ಷ ಅಧಿವೇಶನ ನಡೆಯುವ ಸ್ಥಾನವು ಒಂದು ಗ್ರಾಮವಾಗಿದೆ. ಹತ್ತಿರದ ರೈಲ್ವೆ ಸ್ಟೇಷನು ಈ ಗ್ರಾಮದಿಂದ ಎಂಟು ಮೈಲು ದೂರದಲ್ಲಿದೆ. ಏನೆಂದರೂ ಈ ವರ್ಷ ಮೂರು ಲಕ್ಷಕ್ಕಿಂತ ಹೆಚ್ಚು ಜನಸಂಪಣಿಯು ನೆರೆದೀತೆಂಬ ಭಾವನೆಯಿಂದ ಅನಕ್ಕನುಸಾರ ನಗರ ನಿರ್ಮಾಣ ಕಾರ್ಯವು ನಡೆಯುತ್ತಿದೆ. ಇದಕ್ಕಾಗಿಯೆ ಬಹಳ ವಿಸ್ತಾರವಾದ ವೈದಾನವನ್ನು ಆರಿಸಿರುವರು. ಇಂಥಾ ದೊಡ್ಡ ಜನಸಂಪಣಿಯು ನೆರೆಯುವಾಗ ಅವರಿಗೆ ನೀರಿನ ಸರಬರಾಯಿಯ ಸಮಸ್ಯೆಯು ಮುಖ್ಯವಾದದ್ದು. ಕಳೆದ ವರ್ಷ ತಪತೀ ನದಿಯು ಹತ್ತಿರವಲ್ಲಿದ್ದುದರಿಂದ ಈ ವಿಚಾರ ತೊಂದರೆ ಇರಲಿಲ್ಲ. ಈ ವರ್ಷವಾದರೋ ನದಿಗಳಿಲ್ಲ. ಅಂತೂ ಜನರಿಗೆ ನಳಿಗೆ ಬಾವಿ (Tube well) ಗಳಿಂದ ನೀರಿನ ಸರಬರಾಯಿ ಮಾಡುವ ಏರ್ಪಾಡು ಮಾಡುತ್ತಲಿದ್ದಾರೆ.

ಊಟೋಪಚಾರ.

ಕಳೆದ ವರ್ಷ ಊಟೋಪಚಾರದ ಏರ್ಪಾಡನ್ನು ಸ್ವಾಗತ ಕಮಿಟಿಯವರು ಮಾಡಿದ್ದರು. ಆದರೆ ಈ ವರ್ಷ ಹೊಸದೊಂದು ಏರ್ಪಾಡು ಮಾಡಲಾಗುವದು. ಪ್ರತಿಯೊಂದು ಪ್ರಾಂತದಿಂದಲೂ ಹೊಟೇಲು ಮಾಲೀಕರು ಬಂದು ಉಪಹಾರ, ಬೋಜನ ಮಂದಿರಗಳನ್ನು ತ್ರಿಪುರಿಯಲ್ಲಿ ನಡೆಸಬೇಕೆಂದು ಆಹ್ವಾನ ಹೋಗುವದು. ಅದರಂತೆ ಪ್ರತಿನಿಧಿಗಳಿಗೆ ಅವರವರ ಪ್ರಾಂತದ ಊಟೋಪಚಾರಗಳೇ ಲಭಿಸುವವು.

ಆರೋಗ್ಯಪಾಲನೆ.

ಒಂದು ಸ್ಥಳದಲ್ಲಿ ಲಕ್ಷೋಪಲಕ್ಷ ಜನರು ಸೇರುವ ಪ್ರಯುಕ್ತ ಆ ಜನರ ಆರೋಗ್ಯವನ್ನು ರಕ್ಷಿಸಲು ವಿಶೇಷ ಏರ್ಪಾಡು ಮಾಡುವದು ಅಗತ್ಯ. ಅದಕ್ಕಾಗಿಯೇ ಆರೋಗ್ಯ ಖಾತೆಯವರು ಕಾರ್ಯೋದ್ಯುಕ್ತರಾಗಿರುವರು. ಆಸ್ಪತ್ರೆಗಳು ಸ್ಥಾಪಿಸಲ್ಪಟ್ಟಿವೆ. ವೈದ್ಯರೂ, ಕಂಪೌಂಡರುಗಳೂ, ಕಾಂಗ್ರೆಸ್ ಆಸ್ಪತ್ರೆಗಳಲ್ಲಿ ಕೆಲಸ ಮಾಡಿರುವರು.

ಸಂಚಾರ ಕಾರ್ಯ.

ರೈಲ್ವೆ ಸ್ಟೇಷನಿಂದ ಅಧಿವೇಶನ ಸ್ಥಳಕ್ಕೆ ಹೋಗಲು ಅನುಕೂಲವಾಗುವಂತೆ ಸ್ವಾಗತ ಸಮಿತಿಯವರು ಬಸ್ಸುಗಳನ್ನು ಸಾಮಾನು ಸಾಗಿಸಲು ಲಾರಿಗಳನ್ನೂ ಏರ್ಪಡಿಸಲಿರುವರು. ಆದ್ದರಿಂದ ಜನರ ಆಗಮನಕ್ಕೂ, ನಿರ್ಗಮನಕ್ಕೂ ಅನುಕೂಲವಾದ ಹೊಸ ಸೌಕರ್ಯಗಳು ಮಾಡಲ್ಪಟ್ಟಿವೆ.

ದೀಪಗಳ ಏರ್ಪಾಡು.

ಹರಿಪುರದಲ್ಲಿ ಕಳೆದ ವರ್ಷ ಆಡಿದಂತೆಯೇ ವಿದ್ಯುದೀಪಗಳ ಏರ್ಪಾಡು ಮಾಡಬೇಕೆಂದಿದ್ದರು. ಆದರೆ ದ್ಯುಚ್ಛಕ್ತಿಯ ಕಂಪೆನಿಯವರು ಬಹಳ ಹೆಚ್ಚು ಹಣ ಕೇಳಿದ್ದರಿಂದ ವಿದ್ಯುದ್ದೀಪ ಹಾಕಿಸುವದಿಲ್ಲವೆಂದೂ, ಅದರ ಸ್ಥಾನದಲ್ಲಿ ಎಣ್ಣೆಯ ಬೆಳಕುಗಳ ಏರ್ಪಾಡು ಮಾಡಲಿರುವರು.

ಪ್ರದರ್ಶನ.

ರಾಷ್ಟ್ರಸಭಾ ಮಹಾಧಿವೇಶನದ ಸಂದರ್ಭದಲ್ಲಿ ಖಾದಿ, ಗ್ರಾಮ ಕೈಗಾರಿಕೆ ಮತ್ತು ಕೃಷಿ ಪದಾರ್ಥಗಳು ನಡೆಯುವ ಈ ಸಮಾರಂಭದ ಉದ್ಘಾಟನಾ ಸಮಾರಂಭವನ್ನು ಪೂಜ್ಯಗಾಂಧಿಯವರು ನೆರವೇರಿಸಲಿರುವರು. ಅಧಿವೇಶನಕ್ಕೆ ಒಂದು ವಾರಕ್ಕೆ ಮೊದಲು ಈ ಪ್ರದರ್ಶನವು ನಡೆಯುವದು.

ಅಧ್ಯಕ್ಷರ ಮೆರವಣಿಗೆ.

ಕಳೆದ ಹರಿಪುರ ಅಧಿವೇಶನದಲ್ಲಿ ಅಧ್ಯಕ್ಷರ ಮೆರವಣಿಗೆಯು 51 ಎತ್ತುಗಳ ಎಳೆಯಲ್ಪಟ್ಟ ಬಂಡಿಯಿಂದ ನಡೆಸಲ್ಪಟ್ಟಿತು. ಈ ವರ್ಷ ಎಳು ಅನೆಗಳ ಎಳೆಯಲ್ಪಟ್ಟ ರಥದಲ್ಲಿ ಮೆರವಣಿಗೆ ನಡೆಯುವದು. ಕಾಂಗ್ರೆಸ್ ನಗರಕ್ಕೆ ಮಹಾ ಕೋಸಲದಲ್ಲಿ ರಾಜಕೀಯ ಜಾಗೃತಿ ಮಾಡಿದ ಶ್ರೀ ವಿಷ್ಣುದತ್ತ ಶುಕ್ಲರ ಹೆಸರಿಡುವರು. ಅಂತೂ ಈ ವರ್ಷದ ಮಹಾಧಿವೇಶನವು ಮಹಾ ವಿಜೃಂಭಣೆಯಿಂದ ನಡೆಯುವದೆಂಬದರಲ್ಲಿ ಸಂದೇಹವಿಲ್ಲ. ಮಧ್ಯಪ್ರಾಂತದ ಮಂತ್ರಿಗಳಾಗಿದವರೇ ಕಂಕಣಬದ್ಧರಾಗಿ ಇಳಿದಾಗ ಅಧಿವೇಶನವು ಯಶಸ್ವಿಯಾಗುವದರಲ್ಲಿ ಏನು ತಾನೇ ಸಂದೇಹ?

ರೂಪಾಯಿಯ ದರ ಇಳಿಸುವಿಕೆ.

'ರೂಪಾಯಿಯ ವಿನಿಮಯ ದರವು 18 ಪೆನ್ಸ್‌ಗಳೆಂದು ನಿರ್ಧರಿಸಿದಂದಿನಿಂದ ದೇಶದ ಅನೇಕ ಸಂಘ ಸಂಸ್ಥೆಗಳು ವಿರೋಧಿಸಿವೆ. ಈ ಬೇಡಿಕೆಯನ್ನು ಅಲಕ್ಷಿಸಿ ಸರ್ಕಾರವು ಕಳೆದ ಜುಲೈಯಲ್ಲಿ ಈ ದರವನ್ನು ಕಮ್ಮಿ ಮಾಡಲಾಗುವುದಿಲ್ಲವೆಂದು ಪ್ರಕಟಿಸಿದೆ. ಈ ವಿನಿಮಯ ದರದಿಂದ ಹಿಂದೂಸ್ಥಾನದ ವ್ಯಾಪಾರವು ಕುಗ್ಗಲು ಕಾರಣವಾಗಿದೆ. ಆದ್ದರಿಂದ ಈ ಪರಿಸ್ಥಿತಿಯಲ್ಲಿ ನಮ್ಮ ದೇಶದ ವ್ಯಾಪಾರವು ಸುಧಾರಿಸಬೇಕಾಗಿದ್ದರೆ ರೂಪಾಯಿಯ ದರವನ್ನು 1 ಶಿಲ್ಲಿಂಗ್ 4 ಪೆನ್ಸಿಗೆ ಇಳಿಸಬೇಕೆಂದು ಈ ಕಮಿಟಿಯ ಅಭಿಪ್ರಾಯಪಡುತ್ತದೆ.'

ಇಂಡಿಯೊದ ಪ್ರಮುಖ ಟಾನಿಕ್

ಆತಂಕನಿಗ್ರಹ

— ಮಾತ್ರೆಗಳು —

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಹೀನತೆ ಇವನ್ನು ಗುಣಪಡಿಸಿ, ಆರೋಗ್ಯಕಾರಿಯೂದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಈ ಮಾತ್ರೆಗಳು ಉತ್ತಮ ಬಲವರ್ಧಕವಾಗಿರುತ್ತದೆ. ಲಂಕ್ಷಾಂತರ ಜನರಿದನ್ನು ಉಪಯೋಗಿಸುತ್ತಿರುವರು. ಒಂದು ಡಬ್ಬಿ ಉಪಯೋಗಿಸಿ ನೋಡಿ. ಮೂವತ್ತೆರಡು ಮಾತ್ರೆಗಳ ಡಬ್ಬಿ ಒಂದಕ್ಕೆ ಒಂದು ರೂಪಾಯಿ ಮಾತ್ರ.

ಹೆಚ್ಚಿನ ವಿವರಕ್ಕೆ ಧರ್ನೂರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮುಶಾಸ್ತ್ರವನ್ನೋದಿರಿ.

ಆತಂಕ ನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ,
52-26 ಬೆಂಗಳೂರು ಸಿಟಿ.

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಪೂರ ಕಂಪನಿ ರಪಿಇ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕಿ.
ಮತ್ತು ಕಂಪೆನಿ,
(52-2) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ: ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಬಿಳ್ಳಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟುಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್:

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ [illegible] ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.
52-41

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಶೀತಜ್ವರ, ಮೋಹಾಲಸ್ಯ, ತಲೆನೋವು, ಬಾಯಾರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು.

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

28 ಸಿ. ಹೆಚ್. ರಾಮುಣ್ಣಿ ವೈದ್ಯರ್.

ಮೂರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮೂ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೊನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

	ರೂ.	ಆ.	ಪೈ.
ಶೇರ್ ಬಂಡವಾಳ	– 50,000	0	0
ವಸೂಲಾದ ಶೇರ್ ಮೊಬಲಗು	– 45,800	0	0
ಜಮೂಬಂದ ತೇವಣಾತಿ	– 2,44,140	6	4
ವಸೂಲಾದ ಕ್ಷೇಮನಿಧಿ	– 1,36,525	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	– 16,753	1	11
ಟ್ರಿಪ್ಸ್ಟ್ ಡಿಪಾಜಿಟ್ಟು	– 35,550	2	4

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ತೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಆಥವ ಹೆಚ್ಚಿನ ಅವಧಿಯ ತೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ಬ್ಯಾಂಕ್ ಲೆಕ್ಕವೂ ಮತ್ತು ಟ್ರಿಪ್ಸ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ಟ್ರಿಪ್ಸ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ಜೌರೀರ ಎ. ಪುಂಡಣ್ಣನವರು ಬಿ. ಎ., ಬಿ. ಎಲ್.
ಸೆಕ್ರೆಟರಿ:—ಪುಲಿಯಂಡ ಜಿ. ಐಯ್ಯಪ್ಪನವರು ಬಿ. ಎ., ಬಿ. ಎಲ್.

ತಾ. 1-10-1938

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮೂಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ
ನೀವೇಕೆ ಚಂದಾದಾರರಾಗಬಾರದು?

ನಿಮ್ಮ ಕರ್ತವ್ಯ.

ಪ್ರತಿಯೊಬ್ಬ ಮನುಷ್ಯನು ವಿವಾಹಿತನಿರಲಿ, ಅವಿವಾಹಿತನಿರಲಿ, ಧನವಂತನಿರಲಿ, ಧನಹೀನನಿರಲಿ, ಆತನ ರಕ್ಷಣೆಗೊಳಪಟ್ಟ ಕೆಲವರಿದ್ದೇ ಇರುವರು. ಈತನ ಮರಣಾನಂತರವೂ ಅಂಥವರು ಸುಖಿಗಳಾಗಿರುವಂತೆ ದಾರಿ ತೋರಿಸಿ ಕೊಡುವದು ಇವನ ಆದ್ಯ ಕರ್ತವ್ಯ.

ಇಂಥಾ ನಿಮ್ಮ ಕರ್ತವ್ಯ ಸಾಧನೆಗೆ "ಓರಿಯಂಟಲ್" ಸಹಕಾರಿ.



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬಿಂಗಳೂರು)

64 ವರ್ಷಗಳಿಂದಲೂ "ಓರಿಯಂಟಲ್ ಪೋಲಿಸಿಗಳು" ಸಾವಿರಾರು ಅನಾಥ ಕುಟುಂಬಗಳನ್ನು ಅವುಗಳ ಕಷ್ಟದಿಂದ ಉದ್ಧರಿಸಿವೆ.

ಕ್ರಮೇಣ ಪ್ರತಿಯೊಬ್ಬನೂ ವಿಮಾ ಮಾಡಲಶಕ್ತನಾಗಬಹುದಾದ್ದರಿಂದ ನಿಮ್ಮ ಕರ್ತವ್ಯವನ್ನು ಮಾಡಲು ತಪ್ಪಬೇಡಿರಿ.

"ಓರಿಯಂಟಲ್"ನಲ್ಲಿ ವಿಮಾ ಮಾಡಿ, ನಿಮ್ಮ ರಕ್ಷಣದಲ್ಲಿರುವವರ ಜೀವನವನ್ನು ಭದ್ರಪಡಿಸಿರಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಪ್ರತಿನಿಧಿಗಳೂ, ಶಾಖೆಗಳೂ ಇಂಡಿಯಾವಲ್ಲೆಲ್ಲಾ ಇರುವರು.

ಮೆ. ಯಂ. ಹೆಚ್. ಕೃಷ್ಣಮೂರ್ತಿ,
(ಇನ್ಸ್ಪೆಕ್ಟರ್, ಮೈಸೂರು.)

ಮೆ. ಡಿ. ಶೇಷಾದ್ರಿ, ಇನ್ಸ್ಪೆಕ್ಟರು, ಶಿವಮೊಗ್ಗಾ.

ಮೆ. ಎಲ್. ಎಫ್. ಸಿ. ವಾಸ್,
(ಇನ್ಸ್ಪೆಕ್ಟರ್, ಮಡಿಕೇರಿ.)

52-50

Printed & Published by P. I. Belliappa, at 'Kodagu' Press Mercara for 'Kodagu' Ltd.